
ಕಲ್ಯಾಣ ಕಿರಣ

ಫೆಬ್ರವರಿ : 2000 ಬೆಲೆ : 5 ರೂ.





ದಿ. ೧೩-೧-೨೦೦೦ ಪೀಠಾರೋಹಣ ಮಾಡಿದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು. ಮಾಲಾರ್ಪಣೆ ಮಾಡುತ್ತಿರುವ ಶರಣ. ಎಸ್. ಐ. ನಾಗಪ್ಪ, ಬಲತುದಿಯಲ್ಲಿ : ಉದಗೀರ್ ಶಾಸಕ ಗೋವಿಂದರಾವ್ ಕೇಂದ್ರೆ



ಸಾಮೂಹಿಕ ಲಿಂಗಪೂಜೆ ತೋರಿಸುತ್ತಿರುವ ಮಾತಾಜಿ.
ಪಕ್ಕದಲ್ಲಿ ಪೂಜ್ಯ ಅಲ್ಲಮ ಪ್ರಭು ಸ್ವಾಮಿಗಳು, ಪೂಜ್ಯ ಬಸವ ಕುಮಾರ್ ಸ್ವಾಮೀಜಿ.

ಕಲ್ಯಾಣ ಕಿರಣ

ಸಂಪುಟ ೩೧ | ಬಸವ ಶಕೆ-೮೬೬ | ಆಜೀವ ಸದಸ್ಯತ್ವ : ೫೦೦ ರೂ
ಸಂಚಿಕೆ ೨ | ಫೆಬ್ರವರಿ - ೨೦೦೦ | ವಾರ್ಷಿಕ ಚಂದಾ : ೫೦ ರೂ

ಶರಣ ಮೇಳಕ್ಕೆ ಆಹ್ವಾನ

ಬನ್ನಿ ಮಹಾಮನೆಯು ಕೈ ಬೀಸಿ ಕರೆಯುತಿದೆ
ಬಸವ ಸಂತಾನಕೆ ತಾಯ್ಮನೆಯ ನೀಡುತಿದೆ ॥ ಪ ॥

ಮಹಮನೆಯ ಭಕ್ತಿ ಸಿರಿ ಅನುಭವ ಮಂಟಪ
ಈ ಜಗದ ಐಸಿರಿ ಅರಿಯಿರಿ ನೀವೆಲ್ಲ ॥ ಅ.ಪ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮಣ್ಣ ಚಿನ್ಮಯ ಚನ್ನಬಸವಣ್ಣ
ನಮ್ಮ ದೊಡ್ಡಪ್ಪ ಅಲ್ಲಮ ಪ್ರಭುರಾಯ
ಪ್ರೇಮದ ಚಿಕ್ಕಪ್ಪ ಸಿದ್ದರಾಮ ॥

ಅಕ್ಕಮಹಾದೇವಿ ಪ್ರೇಮದ ಸೋದರಿ
ಚೊಕ್ಕ ಮಡಿವಾಳಯ್ಯ ಅಕ್ಕರೆಯ ಮಾವ
ಹರಳಯ್ಯ-ಮಧುವಯ್ಯ-ಮೋಳಿಗೆಯ ಅಯ್ಯ ಈ
ಶರಣರೆಮ್ಮಯ ಬಂಧು ಬಳಗ ॥

ಇಂಥ ಮಹಾಮನೆಯು ಜಗದೊಳೆಲ್ಲೂ ಇಲ್ಲ
ಅಂತೆಲ್ಲ ಧರ್ಮಗಳಲಿ ತಂದೆಯರು ಮಾತ್ರ
ಒಬ್ಬ ಗುರುವಿಗೆ ಅಲ್ಲಿ ಕೆಲವು ಶಿಷ್ಯಂದಿರು
ಬಸವ ಸೂರ್ಯನ ಸುತ್ತ ಶರಣ ಸಂದೋಹ ॥

ಕಲ್ಯಾಣ ಮಹಮನೆಯು ಮರುಹುಟ್ಟು ಪಡೆದಿಹುದು
ಕೂಡಲ ಸಂಗಮದಿ ತಲೆ ಎತ್ತಿ ನಿಂತಿಹುದು
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ವಿಶ್ವ ಪ್ರೇಮ ಸಾರುತಿಹುದು ॥

ಹುಟ್ಟಿನಿಂದಲಿ ನೀವು ಏನೇ ಇರಬಹುದು
ಸದ್ಯದ ಗುಣದಲಿ ಹೇಗೇ ಇರಬಹುದು
ಶರಣ ಮೇಳಕೆ ಬರಲು ಪರುಷದ ಸ್ಪರ್ಶ
ಅರಿವಿನ ಹೊನಲಿನಲಿ ಹೊಂದುವಿರಿ ಹರ್ಷ ॥

ಕೂಡಲ ಸಂಗಮ ಧರ್ಮಕ್ಷೇತ್ರದಲ್ಲಿ
ನಡೆಯುತಿಹ ಮೇಳವು ತೌರಿನ ಹಬ್ಬ
ಬಸವ ಕ್ರಾಂತಿಯ ದಿನದಿ ಶರಣರನು ಸೇರಿಸಿ
ಬಸವ ಸಂತಾನಕೆ ತರುತಿದೆ ಉಬ್ಬ ॥

ಮಹಾಮನೆಯ ಐಸಿರಿಯ ನೋಡಲು ಬನ್ನಿ
ವಚನಾಮೃತದ ಬುತ್ತಿ ಉಣ್ಣಲು ಬನ್ನಿ
ತತ್ತ್ವದ ಜ್ಯೋತಿಗಳು ಬೆಳಗುತಿಹವಿಲ್ಲಿ
ಸಚ್ಚಿದಾನಂದನೊಲುಮೆ ಪಡೆಯಲು ಬನ್ನಿ ॥

4 ಜನವರಿ 2000 — ಮಾತಾಜಿ

★ ಕಲ್ಯಾಣ ಕಿರಣ ★

ಸಂಪುಟ ೩೧ | ಬಸವ ಶಕೆ-೮೬೬ | ಆಜೀವ ಸದಸ್ಯತ್ವ : ೫೦೦ ರೂ

ಸಂಚಿಕೆ ೨ | ಫೆಬ್ರವರಿ - ೨೦೦೦ | ವಾರ್ಷಿಕ ಚಂದಾ : ೫೦ ರೂ

ಕಿರಣಗನ್ನಡಿ

ಪೂಜ್ಯ ಮಾತಾಜಿ ಕುರಿತು

ಮಾತೆಯರಲ್ಲಿ ಮಹಾಮಾತೆ
ತ್ಯಾಗಿಗಳಲ್ಲಿ ಮಹಾತ್ಯಾಗಿ
ಶೂರರಲ್ಲಿ ಮಹಾಶೂರಳು
ಧೀರರಲ್ಲಿ ಮಹಾಧೀರಳು
ಸಾಹಿತಿಗಳಲ್ಲಿ ಮಹಾಸಾಹಿತಿ
ಜಗದ್ಗುರುಗಳಲ್ಲಿ ಮಹಾಜಗದ್ಗುರು
ವೀರರಲ್ಲಿ ಮಹಾವೀರಳು
ಭಕ್ತರಲ್ಲಿ ಮಹಾ ಬಸವ ಭಕ್ತಳು
ಶರಣರಲ್ಲಿ ಮಹಾ ಶರಣೆ
ಸಕಲರಿಗೂ ಮಾರ್ಗವ ತೋರಿದ
ಮಹಾಮಾತೆ ಮಹಾದೇವಿ ತಾಯಿ ನಮೋ ನಮೋ

- ಶ್ರೀಶೈಲ, ದಾರವಾಡ

KALYANA KIRANA - Reg No. 19988/70. Monthly Magazine printed and published by K. Shambulingaiah at Prabhudeva Printing Press, Basava Gangotri, Kumbalagodu, Bangalore -560 074, Phone : 8437234

ವಚನ ಪರುಷ

- ಮಾತಾಜಿ

ಶರಣನ ಲಕ್ಷಣ

ಕಾಮವೇಕೋ ಲಿಂಗಪ್ರೇಮಿ ಎನಿಸುವಂಗೆ ?
ಕ್ರೋಧವೇಕೋ ಶರಣವೇದ್ಯನೆನಿಸುವಂಗೆ ?
ಲೋಭವೇಕೋ ಭಕ್ತಿಯಲಾಭವ ಬಯಸುವಂಗೆ ?
ಮೋಹವೇಕೋ ಪ್ರಸಾದ ವೇದ್ಯನೆನಿಸುವಂಗೆ
ಮದಮತ್ಸರ ಉಳ್ಳವಂಗೆ ಹೃದಯಶುದ್ಧವೆಲ್ಲಿಯದೊ ?
ಹದುಳಿಗರಾದಲ್ಲಿಪ್ಪ ನಮ್ಮ ಲಿಂಗದೇವ !

ಧರ್ಮಪಿತ ಬಸವಣ್ಣನವರ ಅಮೂಲ್ಯ ಸಂದೇಶಗಳಲ್ಲಿ ಇದು ಒಂದು. ಪರಮಾತ್ಮನನ್ನು ಕುರಿತು ನಿಜವಾದ ಪ್ರೇಮ (ಕೇವಲ ಭಕ್ತಿ ಮಾತ್ರವಲ್ಲ, ಅದಕ್ಕೂ ಮಿಗಿಲಾದ ಪ್ರೇಮ) ವಿರುವವನು ಉಳಿದ ಲೋಕ ಲೌಕಿಕ ವಸ್ತುಗಳಲ್ಲಿ ಕಾಮವನ್ನು (ಅತ್ಯಾಸಕ್ತಿಯನ್ನು) ಹೊಂದಿರುವುದಿಲ್ಲ. ಬಟ್ಟೆ ಬರೆ, ಒಡವೆ, ವಸ್ತು, ಆಸ್ತಿ ಪಾಸ್ತಿ ಇವುಗಳ ಮೋಹ ದೇವಪ್ರೇಮಿಯಲ್ಲದವನ ಲಕ್ಷಣ. ಓರ್ವ ಸದ್ಗೃಹಸ್ಥನು ಹೆಣ್ಣು-ಹೊನ್ನು -ಮಣ್ಣುಗಳನ್ನು ಹೊಂದಿರಬಹುದು. ಆದರೂ ಅವುಗಳಲ್ಲಿ ತೀವ್ರವಾಗಿ ಅನುರಕ್ತನಾಗಿ ಬಂಧಿತನಾಗದೆ ಕರ್ತವ್ಯ ಪ್ರಜ್ಞೆಯಿಂದ ಮಾತ್ರ ವ್ಯವಹರಿಸುವನು. 'ಕಾಮ' ಎಂಬ ಪದ, ಇಲ್ಲಿ ಕೇವಲ ಕಾಮ (Sex) ಕ್ಕೆ ಸೀಮಿತವಾಗದೆ ಇಡೀ ಆಸೆ-ಆಮಿಷ-ಬಯಕೆಗಳನ್ನು ಸಂಕೇತಿಸುತ್ತದೆ. ಅದೇ ರೀತಿ 'ಲಿಂಗಪ್ರೇಮ'ವು ದೇವರು ಮಾತ್ರವಲ್ಲ ಉದಾತ್ತವಾದ ಅನೇಕ ಧ್ಯೇಯಗಳನ್ನು ಸಂಕೇತಿಸುತ್ತದೆ. ಉದಾಹರಣೆಗೆ ರಾಷ್ಟ್ರ, ಮಾನವ ಸೇವೆ, ದಯೆ ಇತ್ಯಾದಿ ಸಮಷ್ಟಿಯನ್ನು ಸಂಕೇತಿಸುವ ಯಾವುದೇ ಧ್ಯೇಯವೂ ದಿವ್ಯವೇ! ಅದನ್ನು ಹೊಂದಿರುವ ಆದರ್ಶ ವ್ಯಕ್ತಿಯ ಬದುಕು ತನಗಾಗಿ ಇರುವುದಿಲ್ಲ; ಕೇವಲ ನಾನಿನ ತೃಪ್ತಿಗಾಗಿ ಇರುವುದಿಲ್ಲ : ಬೈಬಲ್‌ದಲ್ಲಿ ಒಂದು ಮಾತು ಬರುತ್ತದೆ ''ದೇವರಿಗಾಗಿ ನಪುಂಸಕರಾದವರು ಧನ್ಯರು'' ಎಂದು. ಅಂದರೆ ಯಾರು ದೇವರಿಗಾಗಿ (ಉದಾತ್ತ ಧ್ಯೇಯಗಳಾದ ರಾಷ್ಟ್ರ ಸೇವೆ, ಸಮಾಜ-ಸೇವೆಗಾಗಿ) ತಮ್ಮ ಆಸೆ - ಆಮಿಷ, ಕಾಮ, ಮೋಹಗಳನ್ನು ನಿಗ್ರಹಿಸುವರೋ ಅವರು ಧನ್ಯರು. ಅಪ್ಪ ಬಸವಣ್ಣನವರು ಹೇಳುತ್ತಾರೆ, ''ಕಾಮವ ತೊರೆದಾತ, ಹೇಮವ ಜರಿದಾತ ಮಹಾನ್ ವ್ಯಕ್ತಿ'' ಎಂದು. ''ಕಾಮಸಂಗ ನಿಸ್ಸಂಗವಾಗಿ ಅನುಭಾವ ಸಂಗದಲ್ಲಿ ಉಳಿದವರನ್ನು ಬಹಳ ಗೌರವ - ಆದರಗಳಿಂದ ಕಾಣುತ್ತೇನೆ.'' ಎನ್ನುವರು.

''**ಕ್ರೋಧವೇಕೋ ಶರಣ ವೇದ್ಯನೆನಿಸುವಂಗೆ**'' ಎನ್ನುತ್ತದೆ ಅಪ್ಪ ಬಸವಣ್ಣನವರ ಅಮೃತ ಸಂದೇಶ. ಕೂಡಿ ಬಾಳಬೇಕು ಎನ್ನುವವನು ಕ್ರೋಧಿಯಾಗಿದ್ದರೆ ಆಗದು. ತನ್ನಷ್ಟಕ್ಕೆ ತಾನು ಒಬ್ಬನೇ ಬದುಕುವುದಾದರೆ ತನ್ನ ಸ್ವಪ್ರತಿಷ್ಠೆಯಲ್ಲಿ ತಾನೇ ಸುಖಿಸಬಹುದು. ಆದರೆ ಎಲ್ಲರೊಡನೆ ಕೂಡಿ ಬಾಳುವುದರಲ್ಲಿ ಆನಂದ ಪಡೆಯಬೇಕು ಎನ್ನುವವನು ಬಹಳ ಸಹನಶೀಲನು ಇರಬೇಕಾಗುತ್ತದೆ. ಏಕೆಂದರೆ ತಾನು ಒಳ್ಳೆಯವನೇ ಇದ್ದರೂ ಅವನೊಡನೆ ಒಡನಾಡುವವರು ಅದೇ ಮಟ್ಟದ ಒಳ್ಳೆಯತನ ಹೊಂದಿರುವರೇ ಎಂಬುದನ್ನು ಹೇಳಲು ಆಗದು. ಸಹನೆ, ಶಾಂತಿ, ಸತ್ಯ, ಪ್ರಾಮಾಣಿಕತೆ ಮುಂತಾದ ಉದಾತ್ತ ಗುಣಗಳು ಶರಣರ ಸಹಜ ಲಕ್ಷಣಗಳು ಆಗಬೇಕು. ಕ್ರೋಧವು ವ್ಯಕ್ತಿಯ ಅನೇಕ ದೌರ್ಬಲ್ಯಗಳಲ್ಲಿ ಒಂದು.

ಕೋಪಿ ಮಜ್ಜನಕ್ಕೆ ಎರೆದರೆ ರಕ್ತದ ಧಾರೆ
ಪಾಪಿ ಹೂವನೇರಿಸಲು ಮಸೆದ ಆಯುಧದ ಗಾಯ

ಎನ್ನುತ್ತಾರೆ ಧರ್ಮಪಿತರು. ''ತನುವಿನ ಕೋಪ ತನ್ನ ಹಿರಿಯತನದ ಕೇಡು ; ಮನದ ಕೋಪ ತನ್ನ ಆರುಹಿನ ಕೇಡು'' ಎನ್ನುತ್ತಾರೆ ಮತ್ತೊಂದು ವಚನದಲ್ಲಿ. ಕೋಪವು ತನುವಿನ ಮೂಲಕ ವ್ಯಕ್ತವಾಗುವಾಗ ವ್ಯಕ್ತಿಯು ಆರ್ಭಟಿಸುತ್ತಾನೆ ; ಗಡಗಡ ನಡುಗುತ್ತಾನೆ, ಕಣ್ಣು ಕೆಂಪಾಗುತ್ತದೆ. ನಾಲಿಗೆ ಆವೇಶದಿಂದ ತೊದಲುತ್ತದೆ. ಈ ಉದ್ವೇಗಪೂರಿತ ಕೋಪ ಹೃದಯ ಮೆದುಳುಗಳ ಮೇಲೂ ಒತ್ತಡ ಹೇರಿ ಕೆಲವೊಮ್ಮೆ ಹೃದಯಾಘಾತ, ಮೆದುಳಿನ ರಕ್ತಸ್ರಾವ ಆಗುವ ಸಂಭವ ಸಹ ಇರುತ್ತದೆ. ರಕ್ತದ ಏರೊತ್ತಡಕ್ಕೆ ಕಾರಣವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಆ ವ್ಯಕ್ತಿಯ ಬಗ್ಗೆ ಇನ್ನಿತರರು ತಳೆದಿರುವ ಗೌರವಭಾವ ಕುಸಿಯುತ್ತದೆ. ಆದಕ್ಕೇ ತನುವಿನ ಕೋಪ ತನ್ನ ಹಿರಿಯತನದ ಕೇಡು'' ಎಂದು ಧರ್ಮಗುರುವು ನುಡಿದಿರುವುದು.

ಈ ಸಲದ ಶರಣ ಮೇಳದಲ್ಲಿ ಒಂದು ಪ್ರಸಂಗ ಜರುಗಿತಂತೆ, ಅದು ನನ್ನ ಗಮನಕ್ಕೆ ತಡವಾಗಿ, ನಂತರ ಬಂದಿತು. ಓರ್ವ ಗಣ್ಯರು ಬಂದಿದ್ದರು. ಅವರು ಗಣ್ಯರೆಂದೇ ದೊಡ್ಡ ಕುರ್ಚಿಯನ್ನು ಕೊಡಲಾಗಿದ್ದಿತು. (ಇನ್ನು ಮುಂದೆ ದೊಡ್ಡ ಕುರ್ಚಿಗಳನ್ನು ಇಡದೆ ಎಲ್ಲಾ ಒಂದೇ ತರಹದ ಕುರ್ಚಿಗಳನ್ನು ಇಡಲು ನಿರ್ಧರಿಸಿದ್ದೇವೆ) ಸಭಾ ನಿರ್ವಹಣೆ, ಸ್ವಾಗತ ಮುಂತಾದ ಕಾರ್ಯ ನಿರ್ವಹಿಸಲು ಬೇರೆ ಬೇರೆ ರಾಷ್ಟ್ರೀಯ ಬಸವ ದಳದವರಿಗೆ ಕೊಡಲಾಗುವುದು. ಅಂದು ಸ್ವಾಗತ ಮಾಡುವವರು ಮೈಮರೆವಿನಿಂದಾಗಿ ಆ ಗಣ್ಯರ ಹೆಸರು ಹೇಳದೆ, ಅವರನ್ನು ಸ್ವಾಗತಿಸುವುದನ್ನು ಮರೆತಿದ್ದಾರೆ. ಇದು ಲೋಪವೇನೋ ಸರಿ, ಆದರೆ ಅಕ್ಷಮ್ಯ ಅಪರಾಧವೇನೂ ಅಲ್ಲ. ಏಕೆಂದರೆ ದುರುದ್ದೇಶದಿಂದ ಕೈಬಿಡದೆ ಮೈಮರೆವಿನಿಂದ ಹೇಳಿರಲಿಲ್ಲ. ಆಗ ಯಾರೋ ನೆನಪಿಸಿದರು, ಕ್ಷಮೆ ಕೋರಿ ಸ್ವಾಗತಿಸಲಾಯಿತು. ಆದರೆ ಆ ಗಣ್ಯರ ಜೊತೆಗೆ ಬಂದವರು ಕೋಪದಿಂದ ಕೂಗಾಡಿ, ಚೀರಾಡಿ ಕಾರ್ಯಕ್ರಮ ನಡೆಯಲು ಬಿಡುವುದಿಲ್ಲ ಎಂದರಂತೆ. ಆಗ ಮತ್ತೊಬ್ಬ ಶರಣರು ''ಶಾಂತವಾಗಿ, ನಿಮ್ಮ ಕಾಲು ಹಿಡಿಯುತ್ತೇನೆ.'' ಎಂದು ಕಾಲನ್ನೂ ಹಿಡಿದರಂತೆ. ಇದೆಲ್ಲ ನನಗೆ ಮರುದಿನ ತಿಳಿಯಿತು. ಮರುದಿನ ಪ್ರಾರ್ಥನಾ ಸಭೆ, ನಾನು ವೇದಿಕೆಗೆ ಬರಲು ಅವರ ಹೆಸರು ಕರೆದೆ, ಬರಲಿಲ್ಲ. ಹೋದರೆ ? ಎಂದು ಕೇಳಿದಾಗ, ಅವರು ಕೋಪ-ಮುನಿಸುಗಳಿಂದ ನಿನ್ನೆಯೇ ಹೋದರು ಎಂದು ಒಬ್ಬರು ಹೇಳಿದರು, ''ನಾನು ಕಾಲಿಗೆ ಬೀಳುವೆನೆಂದರೂ. ಆದರೂ ಸಮಾಧಾನಗೊಳ್ಳಲಿಲ್ಲ'' ಎಂದು ಮತ್ತೊಬ್ಬರು ಹೇಳಿದರು. ಏಕೆ ಎಂದಾಗ ಸ್ವಾಗತಿಸುವಲ್ಲಿ ಆದ ಲೋಪವನ್ನು ತೀರಾ ದೊಡ್ಡದಾಗಿ ಗಣ್ಯರ ಸಂಗಡ ಬಂದವರು ತೆಗೆದುಕೊಂಡರು ಎಂದು ಹೇಳಿದರು. ನನಗೆ ವ್ಯಥೆ ಎನಿಸಿದ್ದು ಏನು ಎಂದರೆ ಆ ಕೋಪ ಮುನಿಸುಗಳ ಭರದಲ್ಲಿ ಮರುದಿವಸದ ಅತ್ಯಂತ ಪವಿತ್ರ ಧಾರ್ಮಿಕ ವಿಧಿ ಸಮುದಾಯ ಪ್ರಾರ್ಥನೆಯನ್ನು ಕಳೆದುಕೊಂಡು ಅವರು ದುರ್ದೈವಿಗಳಾದರಲ್ಲ ; ಪುಣ್ಯದ ಬಾಗಿಲಿಗೆ ಬಂದು ಪುಣ್ಯಕ್ಕೆ ಅರ್ಥಾತ್ ಬಸವ ಕೃಪೆಗೆ ಹೊರಗಾದರಲ್ಲ ಎಂದು ನಾನು ಮರಮರ ಮರುಗಿದೆ. ಇಷ್ಟೇ ಅಲ್ಲ ಕೆಲವೊಂದು ನಿರ್ಧಾರಗಳನ್ನೂ ಕೈಗೊಂಡೆ. ''ಶರಣ ಮೇಳ'' ತಮ್ಮ ಕರ್ತವ್ಯವೆಂದು ಬಸವ ಸಂತಾನವು ಬರಬೇಕಾದ ಪವಿತ್ರ ವಿಧಿ. ಇಲ್ಲಿ ಕರೆಯಬೇಕಾದವರು ಯಾರು ? ಕರೆಸಿಕೊಳ್ಳುವವರು ಯಾರು ? ಯಾರು ನಿಜವಾಗಿಯೂ ಬಸವ ಸಂತಾನವೋ ಅವರು ತಾವಾಗಿಯೇ ಬರಬೇಕು. ತಾವಾಗಿಯೇ ಸೇವೆ ಮಾಡಬೇಕು. ತಂತಮ್ಮ ಮನೆಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ತಾವೇ ಮುಂದೆ ನಿಂತು ದುಡಿಯುವಂತೆ, ಶರಣ ಮೇಳದಲ್ಲಿ

ದುಡಿಯಬೇಕು, ಪಾಲ್ಗೊಳ್ಳಬೇಕು. ಕರೆಯುವವರು ನಾವು ಕರೆಸಿಕೊಳ್ಳುವವರು ಅವರು ಎಂದರೆ ಆಗ ಅವರು ಬಸವ ಮಹಾಮನೆಯ ಅತಿಥಿಗಳೇ ವಿನಾ ಮಕ್ಕಳಲ್ಲ ಎಂದಾಗುವುದಿಲ್ಲವೆ ?

'ಶರಣ' ಎಂದರೆ ಸೃಷ್ಟಿಕರ್ತನಿಗೆ ಶರಣಾದವನು, ಧರ್ಮಗುರು ಬಸವಣ್ಣನವರು ಹಾಕಿಕೊಟ್ಟ ಪಥದಲ್ಲಿ ನಡೆಯುವವನು. ಅವನಲ್ಲಿ ಶ್ರದ್ಧೆ, ಶರಣಾಗತಿ, ಕಿಂಕರತೆ ಇರಬೇಕು. ತನ್ನ ಸಂತೋಷಕ್ಕಾಗಿ ತಾನು ಬಂದು ಭಾಗವಹಿಸಬೇಕು; ತನ್ನ ಧನ್ಯತೆಗಾಗಿ ಪರಿಪೂರ್ಣತೆಗಾಗಿ ತಾನು ಬರಬೇಕಲ್ಲದೆ ಕರೆಸಿಕೊಳ್ಳಬೇಕೇಕೆ ? ಸ್ವಾಗತಿಸಿಕೊಳ್ಳಬೇಕೇಕೆ ? ನಾನು ಎಷ್ಟೋ ಸಲ ಆಲೋಚಿಸುತ್ತೇನೆ, ನಮಗೆ V.I.Pಗಳು, V.V.I.Pಗಳು (ಮುಖ್ಯ ವ್ಯಕ್ತಿಗಳು, ಬಹುಮುಖ್ಯವ್ಯಕ್ತಿಗಳು) ಯಾರು ?

೧. ಅರ್ಥಪ್ರಾಣ ಅಭಿಮಾನಕ್ಕೆ ಒಡೆಯರು ಸದ್ಭಕ್ತರಲ್ಲದೆ
ಎನಗಾರು ಇಲ್ಲವಯ್ಯ
ಲಿಂಗದೇವಾ, ನೀವೇ ಪ್ರಮಾಣು. - ಬ.ವ.ದೀ. ೩೪೨

೨. ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ
ಲಿಂಗದೇವಾ, ಎನಗಿದೇ ದಿಬ್ಯ ! - ಬ.ವ.ದೀ. ೩೩೬

೩. ಅಡಿಗಡಿಗೆ ಎನ್ನ ಮನವ ಜಡಿದು ನೋಡದಿರಯ್ಯಾ
ಬಡವನೆಂದೆನ್ನ ಕಾಡದಿರಯ್ಯ
ಎನಗೆ ಒಡೆಯರುಂಟು, ಲಿಂಗದೇವನ ಶರಣರು. - ಬ.ವ.ದೀ ೩೨೬

ಯಾರು ಸದ್ದುಗದ್ದಲವಿಲ್ಲದೆ ಶರಣ ಜೀವನ ನಡೆಸುತ್ತ , ತನುಮನ ಧನ ಅಭಿಮಾನ ಸಮಯ ಪ್ರಾಣ ಎಂಬ ಷಡಂಗಗಳನ್ನು ಮೀಸಲಿಡುವರೋ ಅವರು ಶರಣರು. ಓರ್ವ ವ್ಯಕ್ತಿಯಲ್ಲಿ ಎಲ್ಲಾ ಶರಣ ಗುಣಗಳು ಒಮ್ಮೆಗೇ ಅಳವಡಲಿಕ್ಕಿಲ್ಲ ; ಆದರೆ ಅಹಂಕಾರ, ಕೋಪತಾಪಗಳನ್ನು ಕಳೆದುಕೊಂಡು ಶಾಂತಿ ಗುಣ ಅಳವಡಿಸಿಕೊಳ್ಳುವ ಹಂಬಲ ಬೆಳೆಸಿಕೊಳ್ಳಬೇಕು, ಪ್ರಯತ್ನಿಸಬೇಕು.

ಶರಣರು ಶರಣಮೇಳಕ್ಕೆ ಬರುವುದು ಸೃಷ್ಟಿಕರ್ತನಿಗಾಗಿ, ಧರ್ಮಗುರುವಿಗಾಗಿ. ಆ ಉಭಯ ಶಕ್ತಿಗಳು ಇವರಿಗೆ ಸೃಷ್ಟಿ-ಮಾನವಜನ್ಮ ಮತ್ತು ಧರ್ಮಪಥ-ಶರಣ ಜೀವನ ಕೊಟ್ಟುದಕ್ಕಾಗಿ ಕೃತಜ್ಞತೆ ಸಲ್ಲಿಸಲು ಶರಣರು ಬರಬೇಕು. ಆ ಅರಿವು, ಪ್ರಜ್ಞೆ ಇಲ್ಲದವರನ್ನು ನಾವು ದೊಡ್ಡವರು ಎಂದು ತಿಳಿಯಬೇಕೆ ? ಧರ್ಮಗುರುವು ತಮ್ಮೊಂದು ವಚನದಲ್ಲಿ ಹೀಗೆ ಆದೇಶಿಸಿದ್ದಾರೆ :

ಭಕ್ತ ಭಕ್ತನ ಮನೆಗೆ ಬಂದಡೆ ಭೃತ್ಯಾಚಾರವ ಮಾಡಬೇಕು
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ ಹಿಂದೆ ಮಾಡಿದ ಭಕ್ತಿಗೆ ಹಾನಿ
ಲಕ್ಷಗಾವುದ ದಾರಿಯ ಹೋಗಿ ಭಕ್ತನು ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು

ಉಗ್ಘಡಿಸುವ ಗಬ್ಬಿದೇವಯ್ಯಗಳನ್ನು ಈ ಬಗ್ಗೆ ಕೇಳೋಣ :

ಭಾವ ಭ್ರಮೆವಂತರು ಬಾರದಿರಿ, ಜ್ಞಾನಹೀನರು ಬೇಗ ಹೋಗಿ
ತ್ರಿವಿಧ ಮಲಕ್ಕೆ ಕಟ್ಟಿ ಮುಟ್ಟಿ ಹೊಡೆದಾಡುವರತ್ತಲಿರಿ

ನಿರುತ ಸ್ವಯಾನುಭಾವರು ಬನ್ನಿ, ಪರಬ್ರಹ್ಮ ಸ್ವರೂಪರು ಬನ್ನಿ
ಏಕಲಿಂಗ ನಿಷ್ಠಾಪರರು ದೃಢವಂತರು ಬನ್ನಿ, ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ,
ಎಂದು ಎನಗೆ ಕೊಟ್ಟ ಕಾಯಕ ಕೂಡಲ ಸಂಗಮದೇವರಲ್ಲಿ ಬಸವಣ್ಣ.

ಜ್ಞಾನ ಬಾ, ಮಾಯೆ ಹೋಗೆಂದು ಕಳುಹುತ್ತಿದ್ದೇನೆ.
ಅರಿವು ಬಾ, ಅಜ್ಞಾನ ಹೋಗೆಂದು ಕಳುಹುತಿದ್ದೇನೆ.
ನಿಃಕಲ ಬಾ, ಸಕಲ ಹೋಗೆಂದು ಕಳುಹುತ್ತಿದ್ದೇನೆ.
ನಿಃಪ್ರಪಂಚ ಬಾ, ಪ್ರಪಂಚ ಹೋಗೆಂದು ಕಳುಹುತ್ತಿದ್ದೇನೆ
ಕೂಡಲ ಸಂಗಮದೇವರಲ್ಲಿ ಬಸವಣ್ಣನ ಬಲ್ಲವರನೊಳಗೆ ಕೂಡಿ
ಅರಿಯದವರ ಹೊರಗೆ ತಡೆವುತ್ತಿದ್ದೇನೆ. - ಸಂ. ವ. ಸಂ - ೧ ವಚನ ೧೨೦೫ ಮತ್ತು ೧೨೦೨

ಬಹುಶಃ ಶರಣ ಮೇಳಕ್ಕೆ ಬರುವವರ ಧ್ಯೇಯವೂ ಇದೇ ಆಗಿರಬೇಕು ; ಕರೆಯುವವರ ಧೋರಣೆಯೂ ಹೀಗೇ ಇರಬೇಕು. ಇದರರ್ಥ ಅಂಥ ಸ್ಥಿತಿ ಪಡೆಯದವರನ್ನು ಒಳಗೆ ಬಿಡಬಾರದು ಎಂದಲ್ಲ. ಬರುವವರು ಅಂಥ ಸ್ಥಿತಿ ಗಳಿಸಿಕೊಳ್ಳಲು, ನಿಧಾನವಾಗಿ ಗಳಿಸಿಕೊಂಡರೂ ಪರವಾಗಿಲ್ಲ, ಪ್ರಯತ್ನಿಸಬೇಕು. ಶರಣ ಮೇಳದ ಸಂಯೋಜಕರು ಅಂಥ ಸ್ಥಿತಿ ತಂದುಕೊಡಲು ಅಗತ್ಯವಿರುವ ವಾತಾವರಣ ನಿರ್ಮಿಸಬೇಕು. ಅಹಂಕಾರ, ಸ್ವಾಗತ, ಕುರ್ಚಿಗಾಗಿ ಸ್ಪರ್ಧೆ, ಗಣ್ಯರ ಮುಖಸ್ತುತಿ ಇತ್ಯಾದಿ ಇತ್ಯಾದಿ ಶರಣ ಮೇಳದ ಗುರಿಯಲ್ಲ ; ನಿಜ ಶರಣರನ್ನು ರೂಪುಗೊಳಿಸುವುದೆ ಅದರ ಏಕೈಕ ಗುರಿಯಾಗಬೇಕು. ಯಾವ ಅತಿಥಿಗಳು ಬರುತ್ತಾರೆ ಎಂದು ಲೆಕ್ಕ ಹಾಕಿ ಶರಣರು ಬರಬೇಕಾಗಿಲ್ಲ ; ತಮ್ಮ ಜೀವನದ ಪರಿಪೂರ್ಣತೆ ಸಾಧಿಸಲು ಬರಬೇಕು ಅಷ್ಟೆ.

ಸ್ವಾಗತ ಮಾಡುವಾಗ ಮರೆವಿನಿಂದ ಲೋಪವಾಯಿತು ಎಂದುಕೊಳ್ಳೋಣ. ಆಗ ಯಾರಿಗೂ ತಿಳಿಯದಂತೆ ಕಾರ್ಯಕರ್ತರಿಗೆ ಸೂಚನೆ ನೀಡಿ, ಸ್ವಾಗತ ಮಾಡಿದವರು, ಕ್ಷಮೆ ಕೇಳಿ ಸ್ವಾಗತ ಮಾಡುವಂತೆ ಕೋರಬಹುದಿತ್ತು. ಹಾಗೆ ಮಾಡದೆ ಸ್ವಾಗತ ಹೇಳದೆ ಇರುವುದನ್ನೇ ದೊಡ್ಡ ಹಗರಣ ಮಾಡಿದ್ದು ನೋಡಿದರೆ ನಮ್ಮ ಕೆಲವು ಜನರಿಗೆ ಇನ್ನೂ ಬೌದ್ಧಿಕ, ಹಾರ್ದಿಕ ಸಂಸ್ಕಾರವಾಗುತ್ತಿಲ್ಲ ಎಂದು ವಿಷಾದವೆನಿಸುತ್ತಿದೆ.

ಇದೇ ತರಹದ ಮತ್ತೊಂದು ಪ್ರಸಂಗವನ್ನು ಓರ್ವರು ನಿಭಾಯಿಸಿದ ಜಾಣ್ಮೆ ಶ್ಲಾಘನೀಯ. ಓರ್ವ ವ್ಯಕ್ತಿ (ಮಹಾರಾಷ್ಟ್ರದವರು) ಚುನಾವಣೆಯಲ್ಲಿ ಶಾಸಕರಾಗಿ ಗೆದ್ದು ಬಂದರೆ, ಶರಣ ಮೇಳಕ್ಕೆ ಬಂದು ಗುರು ಬಸವಣ್ಣನವರ ದರ್ಶನ ಪಡೆಯುವುದಾಗಿ ಹರಕೆ ಮಾಡಿಕೊಂಡಿದ್ದರಂತೆ. ಗೆದ್ದುದರಿಂದ ನಾವು ಆಹ್ವಾನಿಸಿರದಿದ್ದರೂ ಬಂದು, ಪೀಠಾರೋಹಣದಲ್ಲಿ ಭಾಗಿಗಳಾಗಿ ಕಾಣಿಕೆ ಸಲ್ಲಿಸಿದರು. ಅವರಿಗೆ ಬಸವ ರಕ್ಷೆಯಾಗಿ ಒಂದು ಶಾಲು ಹೊದ್ದಿಸಬೇಕೆಂದು ಸಿದ್ಧವಾಗಿಟ್ಟಿದ್ದೆವು. ಪೀಠಾರೋಹಣದಲ್ಲಿ ಮಾಲಾರ್ಪಣೆಯಿಂದ ನನಗೆ ವಿಪರೀತ ಆಯಾಸವಾಗಿ, ಐದು ನಿಮಿಷ ಸುಧಾರಿಸಿಕೊಂಡು ಮುಖ ತೊಳೆದು ಭಸ್ಮಧರಿಸಿ ಬರಲು ಹೋದೆ. ಬೇರೆಯವರ ಭಾಷಣ ನಡೆದಿತ್ತು. ಅದರ ನಂತರ ಆ ಶಾಸಕರಿಗೆ ಶಾಲು ಹೊದ್ದಿಸಬೇಕೆಂದಿದ್ದೆವು. ನಾನು ತಿರುಗಿ ಬರುವಷ್ಟರಲ್ಲಿ ಓರ್ವ ಗಡಿಬಿಡಿಯ ವ್ಯಕ್ತಿ ಕನ್ನಡ ಬರದಿರುವ ಅವರನ್ನು ವೇದಿಕೆಯಿಂದ ಕರೆದೊಯ್ದುಬಿಟ್ಟಿದ್ದ. ನಮ್ಮ ಮನಸ್ಸಲ್ಲೂ ಕಳವಳ ಉಳಿಯಿತು. ಹೋಗುವ ಮೊದಲು ಅಲ್ಲಿಯ ರಾಷ್ಟ್ರೀಯ ಬಸವ ದಳದ ಮುಖಂಡಳು ಸೂಕ್ಷ್ಮವಾಗಿ ವಿಷಯಪ್ರಸ್ತಾಪಿಸಿದಳು. ನನಗೆ ಸಂತೋಷವೆನಿಸಿ, ''ಶಾಲು ಒಯ್ದು ತಲ್ಪಿಸಿರಿ. ನಮಗೂ ಸಮಾಧಾನವೆನಿಸುವುದು.'' ಎಂದು

ಹೇಳಿದೆನಲ್ಲದೆ ಆಕೆಯ ಅವಧಾನ ಪ್ರಜ್ಞೆಗೆ ತಲೆದೂಗುವಂತಾಯಿತು. ಕೆಲವೊಮ್ಮೆ ಲೋಪಗಳು ಕೈ ಮೀರಿ ಸಂಭವಿಸಿದಾಗ ಒಳ್ಳೆಯ ಕಾರ್ಯಕರ್ತರು ಹಗರಣ ಮಾಡಿ ಗದ್ದಲ ಎಬ್ಬಿಸದೆ, ಯಾರ ಗಮನಕ್ಕೂ ಬರದಂತೆ ಲೋಪಗಳನ್ನು ಸರಿ ಪಡಿಸಬೇಕು. ಆ ಶರಣೆ ಮಾಡಿದ್ದು ಅಷ್ಟು ವಿವೇಕಯುಕ್ತ. ನಮ್ಮ ಶಾಸಕರಿಗೆ ಶಾಲು ಹೊದ್ದಿಸಲಿಲ್ಲ ಎಂದು ಕೂಗಾಡಿ, ಹಾರಾಡಿ ಅವಲಕ್ಷಣ ಮಾಡಿ, ಎಲ್ಲರ ಮನಸ್ಸಿಗೂ ನೋವಿನ ಮುದ್ರೆ ಒತ್ತಿ ಕೋಪ-ರೋಷಗಳಿಂದ ಹೋಗುವ ಬದಲು ಸೂಕ್ಷ್ಮವಾಗಿ ಸರಿಪಡಿಸಿ ಎಲ್ಲರನ್ನೂ ಸಂತೋಷ ಪಡಿಸುವುದೇ ಜಾಣತನದ ಲಕ್ಷಣ. ಅದಕ್ಕೇ ಧರ್ಮಗುರುವು ಹೇಳಿರುವುದು ''ಕ್ರೋಧವೇಕೋ ಶರಣ ವೇದ್ಯ ಎನಿಸುವಂಗೆ'' ಎಂದು.

''ಲೋಭವೇಕೋ ಭಕ್ತಿಯ ಲಾಭವ ಬಯಸುವಂಗೆ ?''- ಕೆಲವು ಜಿಪುಣರು ಎಲ್ಲಿ ಇತರರೊಡನೆ ಬೆರೆತರೆ ಬಸವ ಜಯಂತಿಗೆ ಕಾಣಿಕೆ ಕೊಡಬೇಕಾಗುವುದೋ ಅಥವಾ ಸಾರ್ವಜನಿಕ ಕಾರ್ಯಗಳಿಗೆ ದೇಣಿಗೆ ಕೊಡಬೇಕಾಗುವುದೋ ಎಂದು ತಾವಾಯಿತು, ತಮ್ಮ ಹೆಂಡತಿ - ಮಕ್ಕಳಾಯಿತು ಎಂದು ಹುಲಿ, ಸಿಂಹಗಳ ಪರಿವಾರದಂತೆ (ಒಂದು ಸಿಂಹ, ತನ್ನ ಸಿಂಹಿಣಿ ಮತ್ತು ಮರಿಗಳೊಂದಿಗೆ ವಲಯವೊಂದನ್ನು ಗುರುತಿಸಿಕೊಂಡು ಬದುಕುವುದಂತೆ. ಅಲ್ಲಿಗೆ ಬೇರೆ ಸಿಂಹ, ಸಿಂಹಿಣಿಯರನ್ನು ' ಬರಗೊಡುವುದಿಲ್ಲವಂತೆ) ಸ್ವ-ಹಿತಾಸಕ್ತರಾಗಿ ಬದುಕುವರು. ಇವರಿಗೆ ಸಮುದಾಯ ಜೀವನದ ಆನಂದವೇ ಲಭ್ಯವಾಗದು. ಅಂಥವರನ್ನು ಕುರಿತು ಧರ್ಮಪಿತರು ಹೀಗೆ ಹೇಳುತ್ತಾರೆ :

ಬಚ್ಚಲ ನೀರು ತಿಳಿಯಾದಡೇನು ? ಸಲ್ಲದ ಹೊನ್ನು ಮತ್ತೆಲ್ಲಿದ್ದಡೇನು ?
ಆಕಾಶದ ಮಾವಿನ ಫಲವೆಂದಡೇನು ? ಕೊಯ್ಯಲಿಲ್ಲ, ಮೆಲ್ಲಲಿಲ್ಲ ।
ಲಿಂಗದೇವನ ಶರಣರ ಅನುಭಾವ(*) ಎಲ್ಲದವರು
ಎಲ್ಲಿದ್ದಡೇನು ಎಂತಾದಡೇನು ? - ಬ.ವ.ದೀ ೧೨೪

(* ಒಡನಾಟ, ಸತ್ಸಂಗ)

ಬಚ್ಚಲ ನೀರು ತಿಳಿಯಾಗಿ ನಿಂತರೂ ಅದನ್ನು ಕುಡಿಯಲು ಅಥವಾ ಪೂಜೆಗೆ ಯಾರೂ ಬಳಸರು. ಹಾಗೆ ಸ್ವಾರ್ಥಿಯಾದ ಮನುಷ್ಯನ ಸಂಪತ್ತು ಸಹ. ಅತ್ಯಂತ ಎತ್ತರಕ್ಕೆ ಬೆಳೆದ ಮಾವಿನ ಮರದ ಫಲವನ್ನು ನೋಡಿ ಸಮಾಧಾನ ಪಟ್ಟುಕೊಳ್ಳಬೇಕೇ ವಿನಾ ತಿಂದು ಅಲ್ಲ. ಕೆಲವು ಶ್ರೀಮಂತರ ಬಂಗಲೆ, ತೋಟ, ವೈಭವ ನೋಡಿ ಹಲವು ಜನ ಹೊಗಳಿ ಸಮಾಧಾನ ಪಟ್ಟುಕೊಳ್ಳುವರು. ಆದರಿಂದ ಅವರಿಗೂ ಲಾಭವಿಲ್ಲ, ಸಮಾಜಕ್ಕೂ ಪ್ರಯೋಜನವಿಲ್ಲ. ಶರಣರ ಒಡನಾಟವು ವ್ಯಕ್ತಿಯನ್ನು ಸಂಸ್ಕರಿಸುವುದು, ಉದಾತ್ತಗೊಳಿಸುವುದಾದ ಕಾರಣ ಲೋಭವನ್ನು ಬದಿಗಿಟ್ಟು ಧರ್ಮವಂತನು ಶರಣರ ಸಂಗಕ್ಕೆ ಹಾತೊರೆಯಬೇಕು.

''ಮೋಹವೇಕೋ ಪ್ರಸಾದವೇದ್ಯನೆನಿಸುವಂಗೆ?'' ತನ್ನ ಸಂಸಾರ ಪತಿ, ಮಡದಿ - ಮಕ್ಕಳು, ಬಂಧು-ಬಳಗ ಎಂದೇ ಸದಾ ಚಿಂತಿಸುವ ವ್ಯಾಮೋಹಿಗೆ ಗುರು ಪ್ರಸಾದ (ಕರುಣೆ), ಲಿಂಗ ಪ್ರಸಾದ, ಜಂಗಮ ಪ್ರಸಾದ ಲಭ್ಯವಾಗುವುದೇ ದುರ್ಲಭ. ಏಕೆಂದರೆ ಆತ ಸಂಸಾರದಲ್ಲಿ, ವ್ಯಾಪಾರದಲ್ಲಿ, ವ್ಯವಹಾರದಲ್ಲಿ ತೀರಾ ಅನುರಕ್ತ. ಕರ್ತವ್ಯ ಪ್ರಜ್ಞೆಯಿಂದ ಸಂಸಾರಕ್ಕೆ ಕೊಡಬೇಕಾದ ಗಮನ ಕೊಡಬೇಕು ನಿಜ, ಆದರೆ ಅದರ ಜೊತೆಗೆ ಪೂಜೆ-ಪ್ರಾರ್ಥನೆ, ಶರಣರ ಸಂಗ-ಗಣಮೇಳಾಪ ಮುಂತಾದ್ದಕ್ಕೂ ಗಮನಕೊಡಬೇಕು. ಮೊದಲಿನದು ಲೌಕಿಕ ಕರ್ತವ್ಯ ಎರಡನೆಯದು ಪಾರಮಾರ್ಥಿಕ ಕರ್ತವ್ಯ! ''ಉಂಡು ಉಪವಾಸಿಯಮ್ಮ ಶರಣನು ಬಳಸಿ ಬ್ರಹ್ಮಚಾರಿ'' ಎಂಬ ಶರಣ ವಾಣಿಯಂತೆ ಶರಣನು ಲೌಕಿಕ ಪರಮಾರ್ಥಗಳನ್ನು

ಸಮತೋಲನಗೊಳಿಸಿಕೊಳ್ಳಬೇಕು.

ಮದ ಮತ್ತು ಮತ್ಸರಗಳು ಮನಸ್ಸನ್ನು ಕಲುಷಿತಗೊಳಿಸುವ ಕೊಳೆಗಳು. ಇವುಗಳಿಂದ ಹೃದಯಶುದ್ಧಿ ಸಾಧ್ಯವಾಗದು. ಸ್ವಾಭಿಮಾನ ಬೇರೆ ಮದ ಬೇರೆ. ಶರಣನು ಸ್ವಾಭಿಮಾನಿಯಾಗಿರಬೇಕು; ಆದರೆ ಮದದಿಂದ ಉನ್ಮತ್ತನಾಗಬಾರದು. ಅಹಂಕಾರದಿಂದ ಬೀಗಿ ಇತರರನ್ನೂ ತಿರಸ್ಕಾರದಿಂದ ಕಾಣಬಾರದು. ಮತ್ಸರವು ಗುಣಗ್ರಾಹಕ ಶಕ್ತಿಯನ್ನು ಕಳೆಯುತ್ತದೆ;ಪ್ರತಿಭೆಯನ್ನು ದ್ವೇಷಿಸುತ್ತದೆ. ಮದ ಮತ್ಸರಗಳಿಲ್ಲದ ಹದುಳಿಗ ಭಾವ ಅಂದರೆ ಸದ್ಭಾವವೇ ದೇವನನ್ನೊಲಿಸುವ ಶಕ್ತಿಶಾಲಿ ಸಾಧನ. ಧರ್ಮಪಿತರನ್ನು ಬಣ್ಣಿಸುವ ಮಡಿವಾಳ ಮಾಚಿದೇವರ ಒಂದು ವಚನ ಹೀಗಿದೆ :

ದಾಸೋಹವು ಭೃತ್ಯಾಚಾರವೂ ಅತಿ ಪ್ರೇಮವೂ ಕಿಂಕಿಲವೂ
ಸಂಗನ ಬಸವಣ್ಣಂಗಲ್ಲದೆ ಮತ್ತಾರಿಗೂ ಇಲ್ಲ
ಇಂತಪ್ಪ ಭಕ್ತಿಯ ಕುಳಸ್ಥಳವನರಿಯದೆ
ಎಲ್ಲರೂ ಅಂದಂತೆ ಅಂದು, ಬಂದಲ್ಲಿಯೇ ಬಂದರು.
ಇದ ನೀಕರಿಸಿ ಜಂಗಮವೆ ಲಿಂಗವೆಂದು
ಲಿಂಗಸಾಹಿತ್ಯವಾದ ಬಸವಣ್ಣ
ನಿಮ್ಮ ಬಸವಣ್ಣನಿಂತಹ ನಿತ್ಯನಯ್ಯಾ, ಕಲಿದೇವರದೇವಾ

ಇಂತಹ ಸ್ಥಿತಿಯನ್ನು ಪಡೆದುಕೊಳ್ಳುವುದೇ ಶರಣನ ಗುರಿಯಾಗಬೇಕು. ★

ಬಸವ ಧರ್ಮಪೀಠ (ರಿ.)

ಮಹಾಮನೆ ಮಹಾಮಠ, ಕೂಡಲ ಸಂಗಮ ಸುಕ್ಷೇತ್ರ - ೫೮೭೧೧೫
ತಾ-ಹುನಗುಂದ, ಜಿ-ಬಾಗಲಕೋಟೆ, ಕರ್ನಾಟಕ ರಾಜ್ಯ, ಭಾರತ

ಗಣಮೇಳಕ್ಕೆ ಕರೆ

ಆತ್ಮೀಯ ಶರಣಬಂಧುಗಳೇ,

ಕಾಗೆಯೊಂದಗುಳ ಕಂಡಡೆ ಕರೆಯದೆ ತನ್ನ ಬಳಗವೆಲ್ಲವ ?
ಕೋಳಿಯೊಂದು ಕುಟುಕ ಕಂಡಡೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಆ ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ,

ಎಂದು ಧರ್ಮಕರ್ತರು ಹೇಳುವಂತೆ ಭಕ್ತಿ ಪಕ್ಷದ ಸದಸ್ಯರಾಗಬೇಕಾದುದು ಎಲ್ಲ ಬಸವ ಭಕ್ತರ ಆದ್ಯ ಕರ್ತವ್ಯ

ಮಡಕೆಯ ಮಾಡುವೊಡೆ ಮಣ್ಣೇ ಮೊದಲು,
ತೊಡುಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವನರಿವೊಡೆ ಗುರುಪಥ ಮೊದಲು
ನಮ್ಮ ಲಿಂಗದೇವರನರಿವೊಡೆ
ಶರಣರ ಸಂಗವೆ ಮೊದಲು ಮೊದಲು !

ಆದ್ದರಿಂದ ಗಣ ಸಮಾವೇಶಗಳಲ್ಲಿ ಭಾಗವಹಿಸುವುದು ಅತ್ಯಂತ ಅವಶ್ಯಕ. ನೆನಹು-ಪ್ರತಿನಿತ್ಯ ಸಂಜೆ ೭ ಗಂಟೆಗೆ ಮಾಡುವ ಸಂಕ್ಷಿಪ್ತ ಪ್ರಾರ್ಥನೆ, ಶರಣ ಸಂಗಮ -ವಾರದ

ಸಾಮೂಹಿಕ ಪ್ರಾರ್ಥನೆ, **ಗಣಮೇಳ** - ಶಿವರಾತ್ರಿಯಂದು ಮಾಡುವ ಸಮುದಾಯ ಪ್ರಾರ್ಥನಾ ಸಭೆ, **ಶರಣ ಮೇಳ** - ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಜನವರಿ ೧೨ ರಿಂದ ೧೫ರವರೆಗೆ ನಡೆಯುವ ಶರಣ ಸಮ್ಮೇಳನ ; ಇದಲ್ಲದೆ ಶರಣ ಬಂಧುಗಳು ತಮ್ಮ ಮನೆಯ ಸುಖದ ಸಮಾರಂಭಗಳಾದ ವಿವಾಹ, ನಾಮಕರಣ, ಗೃಹ ಪ್ರವೇಶ ಮುಂತಾದವು ಧಾರ್ಮಿಕ ವಿಧಿಗಳಾದ ವಿಭೂತಿ ವೀಳ್ಯ, ಲಿಂಗೈಕ್ಯ ಸಂಸ್ಕಾರ, ಲಿಂಗೈಕ್ಯರ ಸಂಸ್ಮರಣೆ ಮುಂತಾದವುಗಳನ್ನು ನಡೆಸುವ ಸಮಯದಲ್ಲಿ ಮಾಡುವ ಗಣಸಮಾವೇಶವಾದ **ಶರಣ ಸಮಾಗಮ** ಇವೆಲ್ಲವೂ ಶರಣ ಬಂಧುಗಳನ್ನು ಪರಸ್ಪರ ಒಂದು ಕಡೆ ಬೆರೆಯುವಂತೆ, ಬೆಸೆಯುವಂತೆ ಮಾಡುವ ಅಪೂರ್ವ ಕಾರ್ಯಕ್ರಮಗಳು. ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ನಡೆದ ಏಳನೆಯ ಶರಣ ಮೇಳದ ಸಮಾರೋಪ ಸಮಾರಂಭದಲ್ಲಿ ದಿ.೧೫-೧-೯೪ ರಂದು ಶರಣರ ಮಹಾಸಭೆಯು ಒಂದು ಚಾರಿತ್ರಿಕ ನಿರ್ಣಯವನ್ನು ತೆಗೆದುಕೊಂಡಿದೆ. ಅದೆಂದರೆ ಪ್ರತಿ ವರ್ಷವೂ ಮಹಾಶಿವರಾತ್ರಿಯಂದು ಎಲ್ಲ ಗ್ರಾಮ, ಊರು, ಜಿಲ್ಲಾ ಕೇಂದ್ರ, ನಗರಗಳಲ್ಲಿ **ಶರಣ ಗಣ ಮೇಳ** ಎಂಬ ಸಮಾವೇಶವನ್ನು ನಡೆಸಿ ಸೃಷ್ಟಿಕರ್ತನನ್ನು - ಧರ್ಮಗುರು ಬಸವಣ್ಣನವರನ್ನು ಕೊಂಡಾಡಬೇಕೆಂಬುದು. ಈ ಗಣಮೇಳವನ್ನು ನೀವು ನಡೆಸಬೇಕೆಂಬ ದಿವ್ಯ ಆದೇಶವನ್ನು ಬಸವ ಧರ್ಮದ ಮಹಾಜಗದ್ಗುರು ಪೀಠವು ಕಳಿಸಿಕೊಟ್ಟಿದೆ. ಈ ದಿವ್ಯ ಆದೇಶ ಪಾಲನೆ ನಿಮ್ಮ ಪವಿತ್ರ ಕರ್ತವ್ಯ ಎಂದೇ ಭಾವಿಸಿದ್ದೇವೆ.

ಶಿವರಾತ್ರಿಯು ಶನಿವಾರ ದಿ.೪-೩-೨೦೦೦ ರಂದು ಒದಗಿ ಬಂದಿದ್ದು ಅಂದು ಗಣಮೇಳವನ್ನು ತಾವು ನಡೆಸಬೇಕು. ಊರಿನ ಮಧ್ಯದಲ್ಲಿರುವ ಒಂದು ವಿಶಾಲವಾದ ಮೈದಾನದಲ್ಲಿ ಅಥವಾ ವಿಶಾಲವಾದ ಸಭಾ ಭವನದಲ್ಲಿ ಪ್ರಾರ್ಥನೆಯನ್ನು ನಡೆಸಬೇಕು. ಗಣ್ಯರಿಂದ ಧ್ವಜಾರೋಹಣ, ಬಸವ ಭಾವಚಿತ್ರ ಪೂಜೆ ಮಾಡಬೇಕು. ಅಂದು ಯಾವುದೇ ವ್ಯಕ್ತಿಗೆ ಅವರು ಎಷ್ಟೇ ದೊಡ್ಡವರಿರಲಿ ಅವರಿಗೆ ಮಾಲಾರ್ಪಣೆ ಮಾಡದೆ ಅವರಿಂದ ಧರ್ಮಪಿತರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿಸಬೇಕು. ಬಸವ ಧರ್ಮಪೀಠದಿಂದ ಕಳಿಸಿಕೊಡುವ (ಕಲ್ಯಾಣಕಿರಣ ಮಾಸ ಪತ್ರಿಕೆಯಲ್ಲಿ ಮುದ್ರಿಸಲಾಗಿರುವ) ಸಂದೇಶವನ್ನು ಓದಬೇಕು. ಶ್ರದ್ಧಾ-ಭಕ್ತಿಯಿಂದ ಉಪನ್ಯಾಸ ಮಾಡುವವರಿದ್ದರೆ ಮಾಡಿಸಬೇಕು. ಧಾರ್ಮಿಕ ಶ್ರದ್ಧೆಯೇ ಇರದ ಉಪನ್ಯಾಸಕರಿಂದ ಗೊಂದಲಪೂರ್ಣ ಭಾಷಣಗಳನ್ನು ಮಾಡಿಸಲು ಹೋಗಬಾರದು. ಬೆಳಿಗ್ಗೆ ಮಾಡುವ ಸಮುದಾಯ ಪ್ರಾರ್ಥನೆ-ಶರಣ ಸಂಗಮ ಕಡ್ಡಾಯ ವಿಧಿ, ಸಾಮೂಹಿಕ ಇಷ್ಟಲಿಂಗಾರ್ಚನೆ, ಜಾಗರಣೆ ಮುಂತಾದುವನ್ನು ಅವರವರ ಅನುಕೂಲತೆಗೆ ತಕ್ಕಂತೆ ಇಟ್ಟುಕೊಳ್ಳಬಹುದು.

ಕಲ್ಯಾಣ ಕಿರಣ ಮಾಸ ಪತ್ರಿಕೆ

ಬಸವ ಧರ್ಮ ಪೀಠ, ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಗಳ ಚಟುವಟಿಕೆ, ಕಾರ್ಯಕ್ರಮ ವಿವರ ಮುಂತಾದವನ್ನು ತಿಳಿಯಲು, ತಾತ್ತ್ವಿಕ ಮಾಹಿತಿ ಪಡೆಯಲು ಬಸವ ತತ್ತ್ವಾನುಯಾಯಿಗಳು ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ತಪ್ಪದೇ ಓದುವುದು ಅತ್ಯಗತ್ಯ. ಕೆಲವೊಂದು ವಿಷಯಗಳನ್ನು ಬೇರೆ ಪತ್ರಿಕೆಗಳ ಮೂಲಕ ಕೊಡುವುದು, ತಿಳಿಸುವುದು ಸಾಧ್ಯವಾಗದು. ಅವರು ಹಾಕುವುದೂ ಇಲ್ಲ. ಆದ್ದರಿಂದ ರಾಷ್ಟ್ರೀಯ ಬಸವ ದಳಗಳವರು ಕಡ್ಡಾಯವಾಗಿ ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ವೈಯಕ್ತಿಕವಾಗಿ ಮತ್ತು ಪ್ರಾರ್ಥನಾ ಸಭೆಗಳಲ್ಲಿ

ಓದುವುದು ಅತ್ಯಗತ್ಯವಾಗಿರುತ್ತದೆ. ಕೆಲವು ಪತ್ರಿಕೆಗಳು ಪೂರ್ವಾಗ್ರಹ ಪೀಡಿತವಾಗಿ ಉತ್ಪ್ರೇಕ್ಷಿತ ವರದಿಗಳನ್ನೂ, ಸುಳ್ಳು ವಿವರಗಳನ್ನೂ ಕೊಡುತ್ತಿರುತ್ತವೆ. ಆದ್ದರಿಂದ ರಾಷ್ಟ್ರೀಯ ಬಸವ ದಳಗಳವರು (೫೦೦ ರೂ. ಕಟ್ಟಿ) ಆಜೀವ ಸದಸ್ಯರು ಅಥವಾ (೫೦ ರೂ. ಕಟ್ಟಿ) ವಾರ್ಷಿಕ ಚಂದಾದಾರರಾಗುವುದು ಅವಶ್ಯವಿರುತ್ತದೆ.

ವಿಳಾಸ : **ಕಲ್ಯಾಣ ಕಿರಣ ಮಾಸಪತ್ರಿಕೆ**, ಬಸವ ಮಂಟಪ,
೨೦೩೫, ೨೦ನೇ ಮೇಯಿನ್, ೨ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - ೧೦

ತಮಿಳುನಾಡು, ಆಂಧ್ರ, ಮಹಾರಾಷ್ಟ್ರದಲ್ಲಿರುವ ರಾಷ್ಟ್ರೀಯ ಬಸವ ದಳಗಳವರು ಕನ್ನಡ ಬಲ್ಲ ಯಾರಾದರೂ ಒಬ್ಬರ ನೆರವಿನಿಂದ ಕಲ್ಯಾಣ ಕಿರಣವನ್ನು ಪೂರ್ಣವಾಗಿ ಓದಿ ತಿಳಿಯುವ ಪರಿಪಾಠ ಇರಿಸಿಕೊಳ್ಳಬೇಕು.

ಶರಣ ಮೇಳ ರಸೀತಿ ಪುಸ್ತಕ ವಾಪಸ್ಸು

೨೦೦೦ನೆಯ ಇಸವಿಯ ಜನವರಿಯಲ್ಲಿ ನಡೆದ ೧೩ನೆಯ ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಲು ರಸೀತಿ ಪುಸ್ತಕಗಳನ್ನು ಅನೇಕರಿಗೆ ಕಳಿಸಲಾಗಿದೆ : ಕೆಲವರು ಶರಣ ಮೇಳದ ಸಮಯದಲ್ಲಿ ತಂದುಕೊಟ್ಟಿದ್ದಾರೆ ಮತ್ತೆ ಕೆಲವರು ನಂತರ ಕೊಡುತ್ತಿದ್ದಾರೆ. ಆದರೆ ಎಲ್ಲರೂ ಫೆಬ್ರವರಿ ಕೊನೆಯೊಳಗೆ ರಸೀತಿ ಪುಸ್ತಕವನ್ನು ತಲುಪಿಸಲೇಬೇಕೆಂದು ಕೋರುತ್ತೇವೆ. ಸಂಗ್ರಹ ಮಾಡಿದ ಹಣಕ್ಕೆ ಡಿ.ಡಿ. ತೆಗೆಸಿಕಳಿಸಬೇಕು. ಒಂದು ವೇಳೆ ಏನೂ ಸಂಗ್ರಹ ಮಾಡಿರದಿದ್ದರೆ ರಸೀತಿ ಪುಸ್ತಕಗಳನ್ನು ವಾಪಸ್ಸು ಕಳಿಸಬೇಕು. ಬೆಂಗಳೂರು ವಿಳಾಸಕ್ಕೇ ಕಳಿಸಬೇಕೆಂದು ಸೂಚಿಸುತ್ತೇವೆ.

ಸದ್ಯದಲ್ಲಿ ಬರುವ ಹಬ್ಬ- ಹುಣ್ಣಿಮೆ

೧. **ಚೆನ್ನ ಹುಣ್ಣಿಮೆ** - ಮಾಘ ಪೌರ್ಣಮೆ. ಅಂದು ಚನ್ನಬಸವಣ್ಣನವರ ಸಂಸ್ಮರಣಾರ್ಥ ಶರಣ ಗಣ ಸಮಾವೇಶ ಮಾಡಿ, ಬೆಳುದಿಂಗಳ ಊಟವನ್ನು ಸಾಮೂಹಿಕ ಪ್ರಾರ್ಥನಾ ನಂತರ ಮಾಡುವುದು ೧೯-೨-೨೦೦೦.

೨. ದಿ.೪-೩-೨೦೦೦, ಶನಿವಾರ, ಮಹಾಶಿವರಾತ್ರಿಯಂದು ಗಣಮೇಳ

೩. ಪೂಜ್ಯ ಶ್ರೀ ಮಾತಾಜಿಯವರ ವರ್ಧಂತಿ ೧೩-೩-೨೦೦೦

೪. ಹೋಳಿ ಹುಣ್ಣಿಮೆಯು ದಿ. ೨೦-೩-೨೦೦೦ ರಂದು ಬಂದಿದ್ದು. ರಾಕ್ಷಸನಾಮ ಸಂವತ್ಸರ (೧೧೯೬)ದಲ್ಲಿ ಅದರ ಹಿಂದಿನ ದಿನಗಳಲ್ಲಿ ಕಲ್ಯಾಣ ಕ್ರಾಂತಿ ಸಂಭವಿಸಿದುದು; ಹೋಳಿ ಹುಣ್ಣಿಮೆಯಂದು ಇನ್ನಿತರ ಜನರು ಅತ್ಯಂತ ಕೆಳಮಟ್ಟದ ಆಚರಣೆ ಮಾಡುವ ಕಾರಣ, ಬಸವಾಯತರು ತಮ್ಮ ಮನೆಗಳಲ್ಲಿ **ಕಲ್ಯಾಣ ಕ್ರಾಂತಿ ಸಂಸ್ಮರಣಾ ಕಾರ್ಯಕ್ರಮವನ್ನು** ಆಚರಿಸಬೇಕು

ಫಾಲ್ಗುಣ ದ್ವಾದಶಿ	ದಿ. ೧೭-೩-೨೦೦೦ ಧರ್ಮಪಿತರ ಗಡಿಪಾರು
ತ್ರಯೋದಶಿಯಂದು	ದಿ. ೧೮-೩-೨೦೦೦ ಹರಳಯ್ಯ - ಮಧುವರಸ - ಶೀಲವಂತರ ಬಂಧನ
ಚತುರ್ದಶಿಯಂದು	ದಿ. ೧೯-೩-೨೦೦೦ ಶರಣರ ವಧೆ (ಎಳೆಹೂಟೆ)
ಹುಣ್ಣಿಮೆಯಂದು	ದಿ. ೨೦-೩-೨೦೦೦ ಬಿಜ್ಜಳನ ವಧೆ
ಪಾಡ್ಯದಂದು	ದಿ. ೨೧-೩-೨೦೦೦ ಚನ್ನಬಸವಣ್ಣನವರ ಕಲ್ಯಾಣ ನಿರ್ಗಮನ

ಕಲ್ಯಾಣ ಕ್ರಾಂತಿ ಸಂಸ್ಮರಣಾ ದಿನ ದಿ. ೨೨-೩-೨೦೦೦

ಈ ಆರೂ ದಿವಸಗಳು ಬಸವ ಧರ್ಮದ ಇತಿಹಾಸದಲ್ಲಿ ಕರಾಳ ದಿನಗಳು. ಆದ್ದರಿಂದ ಶರಣ ಬಂಧುಗಳು ಐದು ದಿವಸಗಳ ಕಾಲ ತಮ್ಮ ತಮ್ಮ ಮನೆಗಳಲ್ಲಿ ಕಲ್ಯಾಣ ಕ್ರಾಂತಿಯ ಪುಸ್ತಕವನ್ನು ಸಂಜೆಯ ವೇಳೆ ಪಾರಾಯಣ ಮಾಡಬೇಕು. ಕಲ್ಯಾಣ ಕ್ರಾಂತಿಯ ೨೮ ಪುಟಗಳಂತೆ ದಿನಾಲೂ ಪಠಣ ಮಾಡಬೇಕು. ಇನ್ನಿತರರು ಕುಳಿತು ಕೇಳಬೇಕು. ಫಾಲ್ಗುಣ ಮಾಸದ ಬಹುಳ ಬಿದಿಗೆ ದಿ.೨೨-೩-೨೦೦೦ ರಂದು ಮಹಾಮಂಗಲದೊಡನೆ ಪಠಣವನ್ನು ಮುಕ್ತಾಯ ಮಾಡಬೇಕು. ನಾನು ಬರೆದಿರುವ ಕಲ್ಯಾಣ ಕ್ರಾಂತಿ ಪುಸ್ತಕವು ಮರಾಠಿ ಭಾಷೆಯಲ್ಲೂ ತರ್ಜುಮೆಗೊಂಡಿದೆ. ಮರಾಠಿ ಮಾತೃಭಾಷೆಯವರು ಅದನ್ನೇ ಪಠಣ ಮಾಡಬೇಕು. ಈ ಎಲ್ಲಾ ಧಾರ್ಮಿಕ ಆದೇಶಗಳನ್ನು ಶ್ರದ್ಧಾ-ಭಕ್ತಿಯಿಂದ ಪಾಲಿಸಬೇಕೆಂದು ಹೃತ್ಪೂರ್ವಕವಾಗಿ ಸೂಚಿಸುತ್ತೇನೆ.

ದಿ. ೨೮.೧.೨೦೦೦ — ಶುಭಹಾರೈಕೆಗಳೊಡನೆ

ಕ್ಯಾಂಪ್ : ಬಸವ ಮಂಟಪ, ಬೆಂಗಳೂರು — ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ

ಗಣಮೇಳದಲ್ಲಿ ಸಂದೇಶ ವಾಚನ

ರಚನೆ : ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ,
ಬಸವ ಧರ್ಮಪೀಠ, ಕೂಡಲ ಸಂಗಮ

(ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಿಂದ ಅಥವಾ ಸರಿಯಾಗಿ ಓದಬಹುದಾದ ಆಹ್ವಾನಿತ ಅತಿಥಿಗಳಿಂದ)

ಓಂ ಶ್ರೀ ಗುರು ಬಸವಲಿಂಗಾಯ ನಮಃ, ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಜಗತ್ಕರ್ತ ಲಿಂಗದೇವನನ್ನು ಧ್ಯಾನಿಸಿ, ಈ ಪವಿತ್ರ ಶರಣ ಗಣಮೇಳದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಶರಣ 'ಗಣಮೇಳ' ವು ಅತ್ಯಂತ ಪವಿತ್ರವಾದ ಗಣ ಸಮಾವೇಶ. ಧರ್ಮಪಿತರ ಕಾಲದಲ್ಲಿ ಹಲವಾರು ಗಣಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯಲ್ಲಿ ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ' ಭಕ್ತಿಯ ಬಣ್ಣವೇರಿಸಿದ ಕಾರಣಿಕರಾದರು. ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ ಎಂದರೇನು ?' ಗಣ ಎಂದರೆ ಸಮೂಹ, ಸಮಾಜ. ಧರ್ಮಪಿತ ಬಸವಣ್ಣನವರು ಗಣಧರ್ಮ ಒಂದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ. ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ ಎಂದು ಘೋಷಿಸಿ ತಾತ್ತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡಡೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ನೋಡುತ್ತಲೇ 'ಕೊ ಕ್ಕೊ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿ ಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ ಬಿನ್ನಪವ ಅವಧಾರು ; ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ ಕಿದಹುವೆನಂಕವ
ಕರೆದೊಡೋ ಎನಿಸದಡೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು ಪರಮಾತ್ಮನಿಗೆ ಶರಣಾಗುವುದು. ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. ಗಣಮೇಳಾಪ - ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲಶಸ್ತ್ರ.

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ ಒಟ್ಟುಗೂಡಿದ್ದೇವೆ. ಈ ಗಣಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ - ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ.
ಲಿಂಗದೇವನಿಗೆ ಶರಣಾಗಿದ್ದೇನೆ.
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ತ್ವದ ಪ್ರತೀಕವಾಗಿದೆ, ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ಸೇರಿದ್ದೇವೆ.

ಸರ್ವ ಶರಣರ ದಿನಾಚರಣೆ

ಒಂದು ತತ್ತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (Heritage) ಸಾಗಿ ಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗವಂತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ, ಶಿವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ ಇವರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈವರೆಗೆ ಆಗಿ ಹೋಗಿರುವ ಶಿವಯೋಗಿಗಳು, ಶರಣರು ಅಸಂಖ್ಯಾತರು. ಅವರ ಜಯಂತಿ - ಲಿಂಗೈಕ್ಯ ದಿನ ಆಚರಿಸಲು ವರ್ಷದ ೩೬೫ ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರೀಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟ

ಮೊದಲ ಯೋಗಿಯೂ, ಹಿಂದೂ ಧಾರ್ಮಿಕ ಪರಂಪರೆಯ ಮೂಲಿಗನಾದ ವೇದಪೂರ್ವ ಪ್ರವಾದಿ 'ಯೋಗಿಶಿವ'ನ ತಪಸ್ಸಿನ ದಿನವಾದ 'ಶಿವರಾತ್ರಿ'ಯಂದು ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ

ಬಸವ ಧರ್ಮ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸಾರವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕ್ರಿ.ಶ. ೧೧೩೪ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು. ಶೈವ ಬ್ರಾಹ್ಮಣರಾದ ಮಾದಿರಾಜ - ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹುದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ, ಜಾತಿ ಪದ್ಧತಿ ಇವುಗಳ ಪ್ರತಿಫಲವಾದ ಅಸ್ಪೃಶ್ಯತೆ ಯಜ್ಞ-ಯಾಗಾದಿಗಳ ಹಿಂಸೆ, ಕ್ರೂರದೇವತೆಗಳಿಗೆ ಕೊಡುವ ಪ್ರಾಣಿಬಲಿ, ಪೂಜಾದಿಗಳಲ್ಲಿದ್ದ ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯಗಳ ಸಂಕುಚಿತತೆ, ದೇವ-ಭಕ್ತರ ನಡುವೆ ಇವು ಬೆಳೆಸಿದ ಕಂದರ, ಸ್ತ್ರೀ ಶೋಷಣೆ ಮುಂತಾದವುಗಳನ್ನು ಕಂಡು ಬೇಸತ್ತು, ನೊಂದು ತಾಯಿ-ತಂದೆ ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನಿಂದ ದಿವ್ಯ ಆದೇಶವನ್ನು ಪಡೆದರು. ಸಾಕ್ಷಾತ್ಕಾರದ ಅನುಭವವಾಗಿ ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸ ಧರ್ಮದ ರೂಪುರೇಷೆ ಮೂಡಿಸಿಕೊಂಡು ಬಸವರಸ - ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು. ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ, ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು. ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟಿನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು. ಅವರ ನಿರ್ಗಮನದ ನಂತರ ಕಲ್ಯಾಣದಲ್ಲಿ ಕ್ರಾಂತಿಯಾಗಿ ಶರಣರ ವಧೆಯಾಯಿತು. ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ - ಕ್ರಿ.ಶ. ೧೧೯೬ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಬಸವಾದಿ ಪ್ರಮಥರು ವಿಶೇಷ ಪಥವನ್ನು ತೋರಿದ್ದಾರೆ. ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ತ್ವಗಳ ಸಾರ

ಷಡಾಚಾರಗಳು

೧. ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತ ಲಿಂಗದೇವನು ಕಳಿಸಿದ ಪ್ರತಿನಿಧಿ, ದೇವರ

ಕರುಣೆಯ ಕಂದ (ಬಸವಾಚಾರ)

೨. ದೇವನು ಒಬ್ಬ (ಲಿಂಗಾಚಾರ)

೩. ಪ್ರತಿಯೊಬ್ಬನು ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು (ಸದಾಚಾರ)

೪. ಮಾನವರೆಲ್ಲರೂ ಸಮಾನರು, ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)

೫. ಅನ್ಯಾಯವನ್ನು - ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)

೬. ವ್ಯಕ್ತಿಗಿಂತಲೂ ಸಮಾಜ - ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು (ಭೃತ್ಯಾಚಾರ)

ದರ್ಶನ ಶಾಸ್ತ್ರ : ಷಟ್‌ಸ್ಥಲ - ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ ನೆಲೆ - ಪರಮಾತ್ಮನಲ್ಲಿ ಒಡವೆರೆದು ಒಂದಾಗುವುದು. ಜೀವನು ಪರಮಾತ್ಮನೊಡನೆ ಒಂದಾಗ ಬೇಕಾದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರುಸ್ಥಲ (Stages) ಗಳನ್ನು ಅಳವಡಿಸಿಕೊಳ್ಳಬೇಕು.

ಆಚರಣೆ : ಅರ್ಚನೆ - ಅರ್ಪಣೆ - ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು, ಕಾಯಕ ಮಾಡಿ ಊಟ ಮಾಡುವದು ; ಶರಣರ ಸಂಗದಲ್ಲಿ ಒಡನಾಡುವುದು.

ಲಾಂಛನಗಳು : ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು - ಲಿಂಗ - ಜಂಗಮ - ವಿಭೂತಿ -ರುದ್ರಾಕ್ಷಿ-ಮಂತ್ರ-ಕರುಣೋದಕ-ಪ್ರಸಾದ ಅಳವಡಿಸಿಕೊಳ್ಳುವುದು.

ಸಪ್ತನೀತಿ-ಸೂತ್ರ : ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟು ಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿ ಕೊಂಡಿದ್ದಾರೆ, ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಸಮಾಜವನ್ನು ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ಈ ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅತ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು - ಒಡೆಯುವುದಲ್ಲ

ವಿಶ್ವಗುರು ಬಸವಣ್ಣನವರು ವಿಶ್ವ ಕುಟುಂಬತ್ವದ ಬೋಧೆ ನೀಡಿದ್ದಾರೆ.

ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯ

ಇವನಾರು ? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ, ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ, ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವ ಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ, ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪ ಹೊಂದಿದೆ. ಕಾರಣವೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ, ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣಮೇಳದಲ್ಲಿ ಇಂದು ತೊಡೋಣ.

''ಜಯಗುರು ಬಸವೇಶ ಹರಹರ ಮಹಾದೇವ''

ವೀರಶೈವ ಪದವು ಲಿಂಗಾಯತ ಧರ್ಮಕ್ಕೆ ಹೊಂದದಿರುವ ಪದ

ಲಿಂಗಾಯತ ಸಮಾಜಕ್ಕೆ ಹೊಂದದಿರುವ ವೀರಶೈವ ಪದದ ಕೃತಕ ಪ್ರಚಾರ ಖಂಡನಾರ್ಹ

- ಜಗದ್ಗುರು ಮಾತೆ ಮಹಾದೇವಿ

''ಸಮಾನತೆ, ವೈಚಾರಿಕತೆ, ಮಾನವತಾವಾದ ಮುಂತಾದ ಪ್ರಗತಿಪರ ಧೋರಣೆಯ ಲಿಂಗಾಯತ ಧರ್ಮವನ್ನು ವೀರಶೈವವೆಂದು ತಪ್ಪು ತಪ್ಪಾಗಿ ಕರೆಯುವುದೇ ಅಲ್ಲದೆ, ಮುಂಬರುವ 2001ನೇ ಇಸವಿಯಲ್ಲಿ ಬರುವ ಭಾರತ ಸರ್ಕಾರದ ಜನಗಣತಿಯಲ್ಲಿ ಲಿಂಗಾಯತ ಸಮಾಜಕ್ಕೆ ವೀರಶೈವ ಎಂದು ಬರೆಸಲು ಕರೆ ನೀಡುತ್ತಲಿರುವ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಶ್ರೀ ಭೀಮಣ್ಣ ಖಂಡ್ರೆಯವರ ಪ್ರಯತ್ನ ಖಂಡನಾರ್ಹ.'' ಎಂದು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಹುಬ್ಬಳ್ಳಿಯಲ್ಲಿ ಜನವರಿ 24ರಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು, ''ಇಂದಿಗೂ ಇಷ್ಟಲಿಂಗಧಾರಿಗಳಾದ ಲಿಂಗಾಯತರು ಪಟ್ಟಣ ಪ್ರದೇಶ, ಗ್ರಾಮಾಂತರ ಪ್ರದೇಶಗಳಲ್ಲಿ ತಾವು ಲಿಂಗಾಯತರೆಂದೇ ಹೇಳುತ್ತಾರೆ ; ಎಲ್ಲ ಅರ್ಜಿ ಪತ್ರಗಳಲ್ಲಿ ಹಾಗೆಯೇ ಬರೆಯುತ್ತಾರೆ. ಹೀಗಿರುವಾಗ ರೂಢಿಯಲ್ಲಿಲ್ಲದ ಮತ್ತು ಲಿಂಗಾಯತ ಧರ್ಮಕ್ಕೆ ಸೂಕ್ತವಲ್ಲದ 'ವೀರಶೈವ' ಪದವನ್ನು ಜನಗಣತಿಯ 8ನೆಯ ಕಾಲಂದಲ್ಲಿ ಬರೆಸಿರಿ ಎಂದು ವೀರಶೈವ ಮಹಾಸಭಾಧ್ಯಕ್ಷರು ಪ್ರಚಾರ ಮಾಡುತ್ತಿರುವುದು ಸಮಾಜವನ್ನು ದಾರಿ ತಪ್ಪಿಸುವ ಕೆಲಸವಾಗಿದೆ ಇದು ಖಂಡನಾರ್ಹ.

'ವೀರಶೈವ' ಪದವೇ ಸೂಚಿಸುವಂತೆ ಅದು ಶೈವ ಧರ್ಮದ ಸಪ್ತಶಾಖೆಗಳಲ್ಲೊಂದು. ಅದೊಂದು ಸ್ವತಂತ್ರ ಧರ್ಮವಾಗುವ ಎಲ್ಲಾ ಲಕ್ಷಣಗಳನ್ನು ಹೊಂದಿಲ್ಲ. 12ನೆಯ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಕ್ರೋಢೀಕರಣಗೊಂಡು ವಚನ ವಾಙ್ಮಯದ ಮೂಲಕ ಪ್ರತಿಪಾದಿಸಲ್ಪಟ್ಟು ಗುರುಬಸವಣ್ಣನವರಿಂದ ಸಂಸ್ಥಾಪಿತವಾದ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮ ಮಾತ್ರವಲ್ಲ ಪ್ರಗತಿಪರ ವಿಚಾರಗಳಿಂದ ಕೂಡಿ ಜಾತ್ಯತೀತತೆ, ಸಮಾನತೆಯನ್ನು, ವಿಶ್ವ ಸಹೋದರತ್ವವನ್ನು ಸಾರುತ್ತಾ ಜಾಗತಿಕ ಧರ್ಮದ ಲಕ್ಷಣವನ್ನು ಹೊಂದಿದೆ ; ಆದ್ದರಿಂದ ಲಿಂಗಾಯತರು ವೀರಶೈವ ಮಹಾಸಭಾದ ಅಧ್ಯಕ್ಷರ ಪ್ರಚಾರದಿಂದ ಗೊಂದಲಕ್ಕೊಳಗಾಗದೆ ಮುಂಬರುವ ಜನಗಣತಿಯಲ್ಲಿ 'ಲಿಂಗಾಯತ' ಎಂದೇ ಬರೆಸಬೇಕು. ಹತ್ತು ವರ್ಷಕ್ಕೊಮ್ಮೆ ಬರುವ ಜನಗಣತಿಯ ಸದುಪಯೋಗವನ್ನು ಪಡೆದುಕೊಳ್ಳಬೇಕು. ಒದಗಿ ಬರುವ ಸದವಕಾಶವನ್ನು ತಪ್ಪಿಸಿಕೊಳ್ಳಬಾರದು.'' ಎಂದು ಕರೆ ನೀಡಿದರು.

''20ನೆಯ ಶತಮಾನದ ಆರಂಭದವರೆಗೂ ಲಿಂಗಾಯತ ಸಮಾಜದಲ್ಲಿ ಯಾವುದೇ ಗೊಂದಲವಿರಲಿಲ್ಲ ; ನಂತರ ಕೆಲವರು ಕೃತಕವಾಗಿ ವೀರಶೈವ ಪದವನ್ನು ತೂರಿಸಿ ಗೊಂದಲವನ್ನು ಹುಟ್ಟುಹಾಕಿದರು. ಈ ಸಂಚಿನ ಹಿಂದೆ ವಿಶ್ವಗುರು ಬಸವಣ್ಣನವರನ್ನು ಕುರಿತು ಜನರಲ್ಲಿದ್ದ ಅಪಾರ ಭಕ್ತಿ, ನಿಷ್ಠೆಯನ್ನು ಕುಂದಿಸುವ ಉದ್ದೇಶವಿದ್ದಿತು. ವಚನ ವಾಙ್ಮಯವನ್ನು ಅಧ್ಯಯನ ಮಾಡುತ್ತ ಜಾಗೃತಗೊಂಡಿರುವ ಸಮಾಜವು ಇನ್ನು ಇಂಥ ಸಂಚಿಗೆ ಬಲಿಯಾಗದು.'' ಎಂದು ಪೂಜ್ಯ ಮಾತೆಯವರು ನುಡಿದರು. ''2001ನೆಯ ಇಸವಿಯ ಜನಗಣತಿಯಲ್ಲಿ ಧರ್ಮ ಕಾಲಂದಲ್ಲಿ ಲಿಂಗಾಯತ ಎಂದು ಬರೆಸುವ ಬಗ್ಗೆ ಜಾಗೃತಿ ಮೂಡಿಸಲು ಧರ್ಮ ಪ್ರಚಾರಕರ ಐದು ತಂಡಗಳನ್ನು ರಚಿಸಿದ್ದು ಕರ್ನಾಟಕ ಮಾತ್ರವಲ್ಲ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಗೋವಾ, ಮಧ್ಯಪ್ರದೇಶ, ದೆಹಲಿ ರಾಜ್ಯಗಳಿಗೆ ಪ್ರಚಾರಕರ ತಂಡಗಳನ್ನು ಕಳಿಸಲಾಗುತ್ತಿದೆ.'' ಎಂದು ಹೇಳಿದರು.

ಅಪೂರ್ವ ಯಶಸ್ಸಿನ 13ನೆಯ ಶರಣ ಮೇಳದಲ್ಲಿ ತೆಗೆದುಕೊಂಡ ನಿರ್ಣಯಗಳು

ಸುಮಾರು 4 ಲಕ್ಷ ಜನರನ್ನು ಆಕರ್ಷಿಸಿಧ 13ನೆಯ ಶರಣ ಮೇಳವು ಹಿಂದಿನ ದಾಖಲೆಯನ್ನು ಮೀರಿಸಿತು. ಜನವರಿ 12ರಿಂದ 15ರವರೆಗೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ನಡೆದ ಶರಣ ಮೇಳದಲ್ಲಿ ಕೆಲವೊಂದು ಮಹತ್ವಪೂರ್ಣ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

1. ಮುಂಬರುವ ಜನಗಣತಿಯಲ್ಲಿ ಲಿಂಗಾಯತ ಧರ್ಮೀಯರು 'ಲಿಂಗಾಯತ' ಎಂದೇ ಬರೆಸಬೇಕು. ಈ ಬಗ್ಗೆ ಜಾಗೃತಿ ಮೂಡಿಸಲು ಭಾರತೀಯ ಎಲ್ಲಾ ಭಾಷೆಗಳಲ್ಲಿ ಕರಪತ್ರ ಮುದ್ರಿಸಿ ಹಂಚಿಸುವ ವ್ಯವಸ್ಥೆ ಮಾಡಬೇಕೆಂದು ನಿರ್ಣಯಿಸಲಾಯಿತು.
2. ಭಾರತ ದೇಶದ ಮೊಟ್ಟಮೊದಲ ಸಮತಾವಾದಿ ಬಸವಣ್ಣನವರ ಜಯಂತಿಗೆ ಕೇಂದ್ರ ಸರ್ಕಾರವು ಸಾರ್ವತ್ರಿಕ ರಜೆಯನ್ನು ನೀಡಲು ಮನವಿ ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು.
3. ಕೂಡಲ ಸಂಗಮವು ತ್ವರಿತಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವುದರಿಂದಲೂ, ಶರಣ ಮೇಳಕ್ಕೆ ವಿವಿಧ ರಾಜ್ಯಗಳಿಂದೆಲ್ಲ ಸದ್ಭಕ್ತರು ಆಗಮಿಸುತ್ತಿರುವುದರಿಂದ ರೈಲ್ವೆ ಸಂಪರ್ಕವು

ಅತ್ಯಗತ್ಯವಾಗುತ್ತಿದೆ. ಆದ್ದರಿಂದ ಕೂಡಲಸಂಗಮ ಕ್ಷೇತ್ರಕ್ಕೆ ರೈಲ್ವೆ ಸಂಪರ್ಕ ಕಲ್ಪಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು.

4. ಕಿತ್ತೂರು ಚೆನ್ನಮ್ಮನಂತೆ ವಿಶೇಷ ಹೋರಾಟಗಾರ್ತಿಯಾಗಿ, ಸಮರ್ಥ ಆಡಳಿತಗಾರಳೂ ಆಗಿ, ಕರ್ನಾಟಕಕ್ಕೆ ಸುವರ್ಣ ಯುಗ ತಂದುಕೊಟ್ಟ ಕೆಳದಿ ಚೆನ್ನಮ್ಮ ರಾಣಿಯ ಪ್ರತಿಮೆಯನ್ನು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿಯೂ, ವೀರವಿರಾಗಿಣಿ ಅಕ್ಕಮಹಾದೇವಿ ಹುಟ್ಟಿದ ಉಡುತಡಿಯಲ್ಲಿ ಅಕ್ಕಮಹಾದೇವಿಯ ಪುತ್ಥಳಿಯನ್ನು ಸ್ಥಾಪಿಸಲು ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.
5. ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರವು ಸಂಗಮ ಕ್ಷೇತ್ರದ ಅಭಿವೃದ್ಧಿಗಾಗಿ ವ್ಯವಸ್ಥಿತವಾಗಿ ಯೋಜನೆ ರೂಪಿಸಿತು. ಇದೇ ಅಭಿವೃದ್ಧಿ ಪ್ರಾಧಿಕಾರದಿಂದ ಬಸವಣ್ಣನವರ ಜನ್ಮ ಸ್ಥಳ ಬಸವನ ಬಾಗೇವಾಡಿಯಲ್ಲಿ ವಿಶೇಷ ಸ್ಮಾರಕ ನಿರ್ಮಿಸಲು, ಬಸವ ಕಲ್ಯಾಣವನ್ನು ಎಲ್ಲಾ ನಾಗರಿಕ ಸೌಲಭ್ಯಗಳಿಂದ ಕೂಡಿದ ಕ್ಷೇತ್ರವಾಗಿ ರೂಪಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು. ಕೂಡಲ ಸಂಗಮದ ಅಭಿವೃದ್ಧಿಗಾಗಿ ಅಗತ್ಯಕ್ಕಿಂತಲೂ ಹೆಚ್ಚಾಗಿ ಅನವಶ್ಯಕ ವೆಚ್ಚದ ಯೋಜನೆ ರೂಪಿಸಿರುವ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರವು ಭಾರತದ ರಾಜಧಾನಿ ದೆಹಲಿಯಲ್ಲಿ ಬಸವ ಸ್ಮಾರಕವನ್ನು, ಶರಣ ಸಾಹಿತ್ಯ ಕುರಿತು ವಿಶೇಷ ಗ್ರಂಥಾಲಯನ್ನು ತೆರೆಯಲು ಮನವಿ ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು.
6 ನಂತರದ ಜಗತ್ತಿನ ಲೇಸಿಗಾಗಿ ತ್ಯಾಗ ಪೂರ್ಣ ಬಾಳನ್ನು ಸವೆಸಿದ ಮಹಾನ್ ಶರಣರ ಗದ್ದುಗೆಗಳ ಸಂರಕ್ಷಣೆ ಆದ್ಯ ಕರ್ತವ್ಯವಾದ ಕಾರಣ ಸರ್ಕಾರದ ಗಮನವನ್ನು ಸೆಳೆಯುವುದರೊಡನೆ, ಲಿಂಗಾಯತ ಸಮಾಜವು ಸ್ವತಃ ಗದ್ದುಗೆಗಳ ಸಂರಕ್ಷಣೆಯ ಕಾರ್ಯಕ್ಕೆ ಮುಂದಾಗಬೇಕೆಂದು, ತರೀಕೆರೆಯ ಹೊರಗೆ ಇರುವ ವೀರಮಾತೆ ಅಕ್ಕನಾಗಲಾಂಬಿಕೆಯ ಗದ್ದುಗೆಯು ಓರ್ವರ ವೈಯಕ್ತಿಕ ಜಮೀನಿನಲ್ಲಿದ್ದು, ಅದನ್ನು ಸಾರ್ವಜನಿಕ ಸ್ಥಳವನ್ನಾಗಿ ಮಾಡಿ, ಸ್ಮಾರಕವಾಗಿ ಪುನರ್ರಚಿಸಬೇಕೆಂದು ನಿರ್ಣಯಿಸಲಾಯಿತಲ್ಲದೆ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವೆ ಶ್ರೀಮತಿ ರಾಣಿ ಸತೀಶರಿಗೆ ಮೌಖಿಕವಾಗಿ ಬೇಡಿಕೆ ಸಲ್ಲಿಸಲಾಯಿತು.
7. ಬಸವೇಶ್ವರ ದೇವಾಲಯ ಎಂದು ಇರುವವು ಐತಿಹಾಸಿಕ ವ್ಯಕ್ತಿ ಕಲ್ಯಾಣದ ಬಸವಣ್ಣನವರಿಗೆ ಸಂಬಂಧ ಪಟ್ಟವು. ಬಸವಣ್ಣನವರು ನಂದಿಯ ಅವತಾರವೆಂದು ಭಾವಿಸಿ ಬಸವಣ್ಣನ ದೇವಾಲಯಗಳಲ್ಲಿ ನಂದಿಗಳನ್ನು ಸ್ಥಾಪಿಸಲಾಗಿದೆ. ಪೌರಾಣಿಕ ನಂದಿಯ ಗುಡಿಗಳಲ್ಲಿ ಬ್ರಾಹ್ಮಣರ ಪೂಜಾರಿಕೆ ಇರುತ್ತದೆ. ಕಲ್ಯಾಣದ ಬಸವಣ್ಣನವರ ಗುಡಿಗಳಲ್ಲಿ ಲಿಂಗಾಯತರ ಪೂಜಾರಿಕೆ ಇರುತ್ತದೆ. ಗುಡಿಗಳು ಕಲ್ಯಾಣದ ಬಸವಣ್ಣನವೇ ಇದ್ದರೂ ನಂದಿಯ ಶಿಲಾಮೂರ್ತಿಯನ್ನು ಇಡುವುದರಿಂದ ಬಸವಣ್ಣ ಎಂದರೆ ನಂದಿಯೆಂದು ತಪ್ಪು ಕಲ್ಪನೆ ಉಂಟಾಗುತ್ತದೆ. ಆದ್ದರಿಂದ ನಂದಿಯ ಬದಲಿಗೆ ಪುರುಷಾಕಾರದ ಬಸವಣ್ಣನವರ ಮೂರ್ತಿಯನ್ನು ಕೂರಿಸಿದರೆ ಉತ್ತಮ ಕೆಲಸವಾಗುವುದು. ಜನರ ಮನವೊಲಿಸಿ ಬಸವಣ್ಣನವರ ಮೂರ್ತಿ ಇಡಿಸಬೇಕು. ಉಳವಿ ಚೆನ್ನಬಸವಣ್ಣನವರು ಐತಿಹಾಸಿಕ ವ್ಯಕ್ತಿ. ಆದರೆ ಅವರ ಗದ್ದುಗೆಯ ಮೇಲೆ ನಂದಿಯನ್ನು ಇಟ್ಟಿರುವುದು ಅಷ್ಟೇ ಅಭಾಸಕರ ಮತ್ತು ದಾರಿ ತಪ್ಪಿಸುವಂಥದು. ಅಂಥಲ್ಲಿ ಪುರುಷಾಕಾರದ ಮೂರ್ತಿಗಳನ್ನಿಡುವುದೇ ಸೂಕ್ತ ಎಂದು ನಿರ್ಣಯಿಸಲಾಯಿತು.

8. ಮತಾಂತರವನ್ನು ನಿಷೇಧಿಸಬೇಕೆಂದು ಕೆಲವೊಂದು ಜನರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದಾರೆ. ಆದರೆ ಧರ್ಮ ಸ್ವೀಕಾರವು ವ್ಯಕ್ತಿಯ ಮೂಲಭೂತ ಹಕ್ಕು. ತಾನು ಇಷ್ಟಪಟ್ಟ ಧರ್ಮವನ್ನು ವ್ಯಕ್ತಿಯು ಆಯ್ದು ಕೊಳ್ಳಲು ಭಾರತದ ಸಂವಿಧಾನವು ಅವಕಾಶ ನೀಡುತ್ತಿದೆ. ಈ ಹಿನ್ನಲೆಯಲ್ಲಿ ಮತಾಂತರ ನಿಷೇಧದ ಯಾವುದೇ ಪ್ರಯತ್ನವನ್ನು ಶರಣರ ಸಭೆಯು ಸ್ಪಷ್ಟವಾಗಿ ವಿರೋಧಿಸುತ್ತದೆ. ಆದರೆ ಧರ್ಮದ ಹೆಸರಿನಲ್ಲಿ ಉಗ್ರವಾದಿತ್ವವನ್ನು, ರಾಷ್ಟ್ರದ ಛಿದ್ರೀಕರಣವನ್ನು ಖಂಡಿಸುತ್ತದಲ್ಲದೆ, ಧರ್ಮವು ಮನಸ್ಸುಗಳನ್ನು ಒಡೆಯುವ ಸಾಧನವಾಗದೆ ಪರಸ್ಪರರ ಸಾಮರಸ್ಯವನ್ನು ಪ್ರತಿಪಾದಿಸುವ ಸಾಧನವಾಗಬೇಕೆಂದು ಪ್ರತಿಪಾದಿಸುತ್ತದೆ. ಮಾತೃಧರ್ಮ, ಭಾರತೀಯ ಧಾರ್ಮಿಕ ಪರಂಪರೆಯಿಂದ ಮತಾಂತರಗೊಂಡು ಹೊರಹೋಗಲು ಕಾರಣಗಳೇನೆಂಬುದನ್ನು ಅಂತರವಲೋಕನ ಮಾಡಿ ಮತಾಂತರ ಗೊಳ್ಳದಂತೆ ಪ್ರೇರಣೆ ನೀಡಲು ಮತ್ತು ಮರಳಿ ಮಾತೃಧರ್ಮ-ಪರಂಪರೆಗೆ ಬರಲು ಸೂಕ್ತ ವಾತಾವರಣ,ಅವಕಾಶ ಕಲ್ಪಿಸಲು ಶರಣ ಮೇಳದಲ್ಲಿ ನಿರ್ಣಯಿಸಲಾಯಿತಲ್ಲದೆ, ಈ ಕುರಿತು ಬಸವ ತತ್ವಾನುಯಾಯಿಗಳು ಹೆಚ್ಚಿನ ಪರಿಶ್ರಮ ಮಾಡಲು ಕರೆ ನೀಡಲಾಯಿತು.

''ಹದಿಮೂರನೆಯ ಶರಣ ಮೇಳವು ಚಿಂತನಗೋಷ್ಠಿ, ರಾಷ್ಟ್ರೀಯ ಭಾವೈಕ್ಯತಾಗೋಷ್ಠಿ, ಸಮುದಾಯ ಪ್ರಾರ್ಥನೆ, ಬಸವ ಧರ್ಮ ಪೀಠದ ಒಂಭತ್ತನೆಯ ವಾರ್ಷಿಕೋತ್ಸವ, ಪೀಠಾರೋಹಣ, ರಾಷ್ಟ್ರೀಯ ಬಸವ ದಳಗಳ ಮಹಾಧಿವೇಶನ, ಸಮಾರೋಪ ಸಮಾರಂಭಗಳಿಂದ ಕೂಡಿ, ಯಶಸ್ವಿಯಾಯಿತಲ್ಲದೆ "ಬಸವ ದರ್ಶನ" ಎಂಬ ವಿಶೇಷ ಕೃತಿಯನ್ನು, ಉಪಾಸನೆ, ಸಿದ್ಧರಾಮೇಶ್ವರರ ಸ್ತೋತ್ರ ತ್ರಿವಿಧಿ, ವಚನ ಪರುಷ ಮುಂತಾದ ಎಂಟು ಹೊಸ ಧ್ವನಿ ಸುರುಳಿಗಳನ್ನು ಬಿಡುಗಡೆ ಮಾಡಲಾಯಿತು'' ಎಂದು ಶರಣ ಮೇಳ ಉತ್ಸವ ಸಮಿತಿಯ ಕಾರ್ಯಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ವಿವರಗಳನ್ನು ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಹುಬ್ಬಳ್ಳಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಕಲ್ಯಾಣಪ್ಪ ಪರಮಾದಿ ಮತ್ತು ಧಾರವಾಡದ ರಾಷ್ಟ್ರೀಯ ಬಸವ ದಳದ ಉಪಾಧ್ಯಕ್ಷ ಬಸಯ್ಯ ಗಣಾಚಾರಿಯವರು ಉಪಸ್ಥಿತರಿದ್ದರು.

- ವರದಿ. ಶಿವಕುಮಾರ ಧಾಕುಳಗೆ

ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಸ್ಥಲ
ಅಡಗಿತ್ತಲ್ಲಾ ಸಂಗನ ಬಸವಣ್ಣನ ಕರಸ್ಥಲದೊಳಗೆ !
ಇನ್ನಾರಿಗೆ ಭಕ್ತಿಸ್ಥಲ, ಇನ್ನಾರಿಗೆ ಸಾರುವುದೀ ಲಿಂಗಸ್ಥಲ ?
ಗುಹೇಶ್ವರಾ, ಸಂಗನಬಸವಣ್ಣನ ಮರೆಹೊಕ್ಕು ಬದುಕಿದೆನು. - *(ಅ.ಪ್ರ.ವ : ೯೩೯)*

ಗುರುವಿನಲ್ಲಿ ಸದಾಚಾರ, ಲಿಂಗದಲ್ಲಿ ಶಿವಾಚಾರ,
ಜಂಗಮದಲ್ಲಿ ಸಮಯಾಚಾರ,
ಇಂತೀ ತ್ರಿವಿಧಾಚಾರ ಸಂಬಂಧವಾದ ಬಳಿಕ,
ತನ್ನ ಶೀಲಕ್ಕೆ ಶೀಲ ಸಮನಾಗದವರ ಮನೆಯ ಅನುಸರಿಸಿ ನಡೆದಡೆ,
ಕೂಡಲಚನ್ನಸಂಗನ ಶರಣ ಪೂರ್ವಾಚಾರಿ ಬಸವಣ್ಣ ಮೆಚ್ಚನಯ್ಯಾ. - *(ಚ.ಬ.ವ : ೪೦೦)*

ಧಾರವಾಡದ ಕಡಪಾ ಮೈದಾನದಲ್ಲ ಶಿವರಾತ್ರಿಯಂದು ಶರಣ ಗಣಮೇಳ

2000 ಇಸವಿಯ ಶಿವರಾತ್ರಿಯು ಮಾರ್ಚ್ 4ರಂದು ಒದಗಿ ಬಂದಿದ್ದು ಅಂದು ಶರಣ ಗಣಮೇಳವು ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಧಾರವಾಡ ನಗರದ ಕೇಂದ್ರ ಭಾಗದಲ್ಲಿರುವ ಕಡಪಾ ಮೈದಾನದಲ್ಲಿ ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದ ಮುಂದೆ ನಡೆಯಲಿದೆ.

ಕಾರ್ಯಕ್ರಮಗಳ ವಿವರ

1. ಬೆಳಿಗ್ಗೆ 9 ಗಂಟೆಗೆ ಗುರು ಬಸವಣ್ಣನವರ ಭಾವಚಿತ್ರ ಸಹಿತವಾಗಿ ಮೆರವಣಿಗೆ ಮತ್ತು ಶರಣರಿಂದ ಪಥ ಸಂಚಲನ. ಮೆರವಣಿಗೆ ಹೊರಡುವ ಸ್ಥಳ - ಕಲಾಭವನದ ಮುಂದಿನ ಮೈದಾನದಿಂದ.
2. ಬೆಳಿಗ್ಗೆ 11ಗಂಟೆಗೆ - ಕಲಾಭವನದ ಮುಂದಿನ ಮೈದಾನದಲ್ಲಿ ಸಮುದಾಯ ಪ್ರಾರ್ಥನೆ, ಸರ್ವಶರಣರ ದಿನಾಚರಣೆ ಮತ್ತು ಸಂದೇಶ ವಾಚನ.
3. ಮಧ್ಯಾಹ್ನ 2ಗಂಟೆಗೆ - ಉಳವಿ ರಸ್ತೆಯಲ್ಲಿರುವ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಪ್ರಸಾದ ಉಪಾಹಾರ ವಿತರಣೆ.
4. ಸಂಜೆ 6-30ಕ್ಕೆ ಸಾಮೂಹಿಕ ಇಷ್ಟಲಿಂಗಾರ್ಚನೆ.
5. ರಾತ್ರಿ 8ಕ್ಕೆ ಇಷ್ಟಲಿಂಗ ದೀಕ್ಷೆ / ಮಂತ್ರದೀಕ್ಷೆ.
6. ರಾತ್ರಿ 9ಕ್ಕೆ ಫಲಾಹಾರ.
7. ರಾತ್ರಿ 10ರಿಂದ ಬೆಳಗಿನ 6ರವರೆಗೆ ಜಾಗರಣೆ. ಜಾಗರಣೆಯ ಸಮಯದಲ್ಲಿ ವಚನ ಗಾಯನ, ಉಪನ್ಯಾಸ, ಮಂತ್ರಪಠಣ, ರಸಪ್ರಶ್ನೆ, ಪ್ರತಿಭಾ ಪ್ರದರ್ಶನ ಕಾರ್ಯಕ್ರಮ ನಡೆಯಲಿವೆ.

. ಕರಪತ್ರ - ಭಿತ್ತಿಪತ್ರ ಮುದ್ರಣ, ಕಾರ್ಯಕ್ರಮದ ವ್ಯವಸ್ಥೆ .

ಪಥ ಸಂಚಲನದ ಬಳಿಕ ಹಣ್ಣು, ಪಾನಕ ವಿತರಣೆ, ಮಧ್ಯಾಹ್ನ ಮತ್ತು ರಾತ್ರಿ ಪ್ರಸಾದ ವಿತರಣೆ ಮುಂತಾದ ಕಾರ್ಯಗಳಿಗೆ ಉದಾರವಾದ ದೇಣಿಗೆಯನ್ನು ನೀಡಬೇಕೆಂದು, ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಗಣಮೇಳದ ಸಮುದಾಯದ ಪ್ರಾರ್ಥನೆಯಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ.

ರಾಷ್ಟ್ರೀಯ ಬಸವ ದಳ, ಧಾರವಾಡ - ಹುಬ್ಬಳ್ಳಿ

ಸಂಪರ್ಕಿಸುವ ವಿಳಾಸ : ಜಗನ್ಮಾತಾ ಅಕ್ಕಮಹಾದೇವಿ ಮಠ, ಉಳವಿ ರಸ್ತೆ,
ರೈಲ್ವೇ ಗೇಟ್ ಬಳಿ, ಧಾರವಾಡ - 580003ದೂ: 0836-773005

ವಿವರಗಳಿಗಾಗಿ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು

ಶರಣ ಶಿವಣ್ಣ ಶಿರೂರು, ಧಾರವಾಡ : 773263
ಶರಣ ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ : 306106
ಶರಣ ಸುಬ್ಬಣ್ಣ ಮೈಸೂರು, ಧಾರವಾಡ : 779658
ಶರಣ ಲಿಂಗರಾಜ ಇಂಗಳಳ್ಳಿ, ಹುಬ್ಬಳ್ಳಿ : 362354

ಬೆಂಗಳೂರಿನಲ್ಲಿ ಚೆನ್ನಹುಣ್ಣಿಮೆ ಮತ್ತು ಶರಣ ಗಣಮೇಳ

ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಲಿಂಗೈಕ್ಯ ಸಂಸ್ಮರಣಾರ್ಥ ಆಚರಿಸುವ ಚೆನ್ನಹುಣ್ಣಿಮೆಯು ಶನಿವಾರ ದಿನಾಂಕ 19-2-2000ರಂದು ಒದಗಿ ಬಂದಿದ್ದು ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ ಶ್ರೀ ವಿವೇಕಾನಂದ ಪಾರ್ಕ್‌ನಲ್ಲಿ ಅಂದು ಸಂಜೆ 6 ಗಂಟೆಯಿಂದ 8-30ರವರೆಗೆ ಆಚರಿಸಲಾಗುವುದು. ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ಚೆನ್ನಬಸವಣ್ಣನವರನ್ನು ಕುರಿತ ಉಪನ್ಯಾಸ ನಡೆಯಲಿದ್ದು, ನಂತರ ಸಾಮೂಹಿಕ ಗಣ ಭೋಜನವು ನಡೆಯಲಿದೆ. ಈ ಪವಿತ್ರ ಗಣಪ್ರಸಾದ ಸ್ವೀಕಾರದಲ್ಲಿ ಎಲ್ಲ ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಲ್ಲದೆ, ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಪೂಜಾ ಸಾಮಗ್ರಿಗಳೊಡನೆ ಬಂದು ಪಾಲ್ಗೊಳ್ಳಬೇಕೆಂದು ಸೂಚಿಸುತ್ತೇವೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಚೆನ್ನಹುಣ್ಣಿಮೆಯ ವಿಶೇಷ ಕಾರ್ಯಕ್ರಮವು ಜರುಗಲಿದೆ.

ಶಿವರಾತ್ರಿಯಂದು ಶರಣ ಗಣಮೇಳ - ಸರ್ವಶರಣರ ದಿನಾಚರಣೆ

ಶಿವರಾತ್ರಿಯು ಮಾರ್ಚ್ 4ರಂದು ಬಂದಿದ್ದು, ಇದರ ನಿಮಿತ್ತ ಬೆಂಗಳೂರಿನಲ್ಲಿ ಶರಣ ಗಣಮೇಳ ಮತ್ತು ಸರ್ವಶರಣರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ರಾಜಾಜಿನಗರದ 2ನೇ ಬ್ಲಾಕಿನಲ್ಲಿ 20ನೇ ಮುಖ್ಯರಸ್ತೆಯಲ್ಲಿರುವ ಬಸವ ಮಂಟಪದಿಂದ ಬೆಳಿಗ್ಗೆ 9ಗಂಟೆಗೆ ಪಥ ಸಂಚಲನವು ಪ್ರಾರಂಭವಾಗುವುದು. ಬಸವೇಶ್ವರ ನಗರದಲ್ಲಿರುವ ವಿವೇಕಾನಂದ ಪಾರ್ಕ್‌ನಲ್ಲಿ ಬೆಳಿಗ್ಗೆ 11ರಿಂದ ಸಮುದಾಯ ಪ್ರಾರ್ಥನೆ, ಸಂದೇಶವಾಚನ , ಉಪನ್ಯಾಸ ನಡೆಯಲಿವೆ. ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ನಡೆಯಲಿರುವ ಈ ಕಾರ್ಯಕ್ರಮದ ನಂತರ ಪ್ರಸಾದ (ಉಪಾಹಾರ) ವಿತರಣೆ ಇರುವುದು.

ಸಂಜೆ ಸಾಮೂಹಿಕ ಇಷ್ಟಲಿಂಗ ಪೂಜೆ

ರಾಜಾಜಿನಗರದ 2ನೇ ಬ್ಲಾಕಿನಲ್ಲಿರುವ ಬಸವ ಮಂಟಪದಲ್ಲಿ ಸಂಜೆ 6 ಗಂಟೆಯಿಂದ 8 ರವರೆಗೆ ಸಾಮೂಹಿಕ ಇಷ್ಟಲಿಂಗಪೂಜೆ ಇದ್ದು, ಪೂಜಾ ಸಾಮಗ್ರಿಗಳೊಡನೆ ಶರಣ ಬಂಧುಗಳು ಆಗಮಿಸಿ ಪೂಜೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿಸುತ್ತೇವೆ. ಪೂಜಾ ನಂತರ ಅಲ್ಪೋಪಾಹಾರ ಇರುವುದು.

ಪ್ರಸಾದ ವ್ಯವಸ್ಥೆಗಾಗಿ ಉದಾರವಾದ ದೇಣಿಗೆಯನ್ನು ನೀಡಬೇಕೆಂದು, ಪ್ರಸಾದಕ್ಕಾಗಿ ರವೆ, ಹೆಸರುಬೇಳೆ, ಸಕ್ಕರೆ, ತರಕಾರಿ ಮುಂತಾಗಿ ಕೊಡಿಸುವವರು ಕೊಡಿಸಬಹುದೆಂದು ಸೂಚಿಸುತ್ತೇವೆ.

ವಿವರಗಳಿಗಾಗಿ ಸಂಪರ್ಕಿಸಬಹುದಾದ ವಿಳಾಸ :

ವಿಶ್ವ ಕಲ್ಯಾಣ ಮಿಷನ್, ಬಸವ ಮಂಟಪ, 2035, 20ನೇ ಮೈನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010
ದೂರವಾಣಿ : 3325335, 3322790

ಅಪೂರ್ವ ಅನುಭವ ನೀಡಿದ ೧೩ನೆಯ ಶರಣ ಮೇಳ

ವರ್ಷದಿಂದ ವರ್ಷಕ್ಕೆ ವ್ಯಾಪಕ ಪ್ರಚಾರ ಪಡೆಯುತ್ತ, ಹೆಚ್ಚಿನ ಪ್ರದೇಶಗಳಿಂದ ಶರಣಬಂಧುಗಳನ್ನು ಆಕರ್ಷಿಸುತ್ತ ಅವರಲ್ಲಿ ತಾತ್ತ್ವಿಕ ಪ್ರಜ್ಞೆಯನ್ನು, ಧಾರ್ಮಿಕ ಸಹೋದರತ್ವವನ್ನು ಬೆಳೆಸುತ್ತಿರುವ ವಿಶೇಷ ಸಮಾವೇಶ ಶರಣ ಮೇಳ. ೧೯೮೮ರಲ್ಲಿ ಕೂಡಲ ಸಂಗಮ ಕ್ಷೇತ್ರದಲ್ಲಿ ಮೊಟ್ಟ ಮೊದಲನೆಯ ಶರಣ ಮೇಳ ಜರುಗಿತಾದರೆ ೨೦೦೦ದ ಇಸವಿಯ ಜನವರಿ ೧೨ರಿಂದ ೧೫ರವರೆಗೆ ೧೩ನೆಯ ಶರಣ ಮೇಳವು ಜರುಗಿತು.

ವಚನ ಪಠಣ ದಿ. ೯ರಂದು : ವಚನ ಸಾಹಿತ್ಯವು ಕೇವಲ ಸಾಹಿತ್ಯ ಮಾತ್ರವಲ್ಲ ಧಾರ್ಮಿಕ ಸಂವಿಧಾನವೂ ಅಹುದು. ಇಂತಹ ವಚನ ವಾಙ್ಮಯ ಪಠಣದೊಡನೆ ಶರಣ ಮೇಳದ ಧಾರ್ಮಿಕ ವಿಧಿಯು ಜನವರಿ ೯ ರಂದು ಪ್ರಾರಂಭವಾಗುವುದು. ಅದರಂತೆ, ಶರಣ ಸದಾನಂದ ಸ್ವಾಮಿಯವರ ನೇತೃತ್ವದಲ್ಲಿ ವಚನ ಪಠಣವು ದಿ.೯ರಂದು ವಿಧ್ಯುಕ್ತವಾಗಿ ಪ್ರಾರಂಭವಾಯಿತು. ದಿ. ೧೪ ರಂದು ಮಂಗಲಗೊಂಡಿತು.

ಬಸವಣ್ಣನವರ ಅಮೃತಶಿಲಾ ಪುತ್ಥಳಿಯ ಪ್ರತಿಷ್ಠಾಪನೆ

ಪೂಜ್ಯ ಗುರು ಬಸವಣ್ಣನವರ ಆಳೆತ್ತರದ ಸುಂದರ ಅಮೃತ ಶಿಲಾಮೂರ್ತಿಯು ೧೯೯೬ರಲ್ಲಿ ಸಿದ್ಧವಾಯಿತು. ಮಹಾರಾಷ್ಟ್ರದ ಉಮರ್ಗಾದ ಡಾ|| ಎಂ. ಎಸ್. ಮಲಂಗ್ ಮತ್ತು ಶರಣೆ. ಸುರೇಖಾ ಅವರು ಈ ದಿವ್ಯ ಭವ್ಯ ಮೂರ್ತಿಯ ನಿರ್ಮಾಣಕ್ಕೆಂದು ಒಂದು ಲಕ್ಷ ರೂ.ಗಳ ಧನ ಸಹಾಯ ಮಾಡಿದ್ದಾರೆ. ದಿ. ೧೨ ರಂದು ಬೆಳಿಗ್ಗೆ ೯ ಗಂಟೆಗೆ ಬಸವಣ್ಣನವರ ಅಭಯ ಹಸ್ತದ, ದಿವ್ಯ ಮೂರ್ತಿಯ ಪ್ರತಿಷ್ಠಾಪನೆಯು ನೆರವೇರಿತು. ಬಸವ ಧರ್ಮ ಪೀಠಾಧ್ಯಕ್ಷೆಯಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಸವೇಶ್ವರ ಪೂಜಾವ್ರತ ನೆರವೇರಿಸಿದರು. ಶರಣ. ಡಾ|| ಮಲಂಗ್ ಮತ್ತು ಶರಣೆ. ಸುರೇಖಾರು ಪುಷ್ಪಾರ್ಚನೆ ಮಾಡಿದರು. ದಾನಿಗಳಾದ ಮಲಂಗ್ ದಂಪತಿಗಳನ್ನು ಶಾಲು ಹೊದ್ದಿಸಿ ಸನ್ಮಾನಿಸಲಾಯಿತು.

ಚಿಂತನಗೋಷ್ಠಿ

ದಿ.೧೨ ರಂದು ಬೆಳಿಗ್ಗೆ ೯ ಕ್ಕೆ ಶರಣೆಯರು ಸಭಾ ಮಂಟಪದ ವೇದಿಕೆಯ ಮೇಲೆ ಬಸವೇಶ್ವರ ಪೂಜಾ ವ್ರತವನ್ನು ಮಾಡಿ, ವೇದಿಕೆಯನ್ನು ದೈವೀಕರಿಸಿದರು. ೧೦-೩೦ಕ್ಕೆ ಶರಣ ಸಿ.ಬಿ. ಬೇವನೂರು ಅವರು ಬಸವ ಧ್ವಜಾರೋಹಣವನ್ನು ನೆರವೇರಿಸಿದರು. ಹುಬ್ಬಳ್ಳಿಯ ನ್ಯಾಯವಾದಿ ಶರಣ. ಎಂ. ಎಂ. ಹೂಲಿಯವರು ಚಿಂತನಗೋಷ್ಠಿಯನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಗಣನಾಯಕರಾದ ಶರಣ ಬಸವರಾಜೇಂದ್ರಪ್ಪ ಮತ್ತು ಗುಲ್ಬರ್ಗಾ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ಶಂಕರಪ್ಪ ಮಹಾಂತಗೋಳ ಅತಿಥಿಗಳಾಗಿ ಆಗಮಿಸಿದ್ದರು. ಸಭಾಧ್ಯಕ್ಷತೆಯನ್ನು ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ ಶರಣ. ಎನ್. ಪುಟ್ಟರುದ್ರಪ್ಪ ವಹಿಸಿದ್ದರು.

ಎರಡನೆಯ ಚಿಂತನಗೋಷ್ಠಿಯನ್ನು ಜಗದ್ಗುರು ಅಲ್ಲಮ ಪ್ರಭುದೇವರ ಮಠದ ಪೂಜ್ಯ ಶ್ರೀ ಸಿದ್ದೇಶ್ವರಾನಂದ ಸ್ವಾಮಿಗಳು ಉದ್ಘಾಟಿಸಿದರು. ಗೋಕಾಕ್ ಬಸವ ಮಂಟಪದ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ಧ್ವಜಾರೋಹಣ ಮಾಡಿದರು. ಬೆಂಗಳೂರಿನ ಖ್ಯಾತ ನ್ಯಾಯವಾದಿ ಶರಣ. ಜಯರಾಜ್, ವಕೀಲರು ವಿಷಯ ಮಂಡನೆ ಮಾಡಿದರು. ಈಚಲಕರಂಜಿಯ ರಾಷ್ಟ್ರೀಯ ಬಸವ ದಳದ ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಈ ಎರಡೂ ಚಿಂತನಗೋಷ್ಠಿಗಳಲ್ಲಿ ಮುಕ್ತ ಚರ್ಚೆ ನಡೆದು, ಅನುಭವ ಮಂಟಪದ ರೀತಿಯಲ್ಲಿ ಸಭೆಯು ಭಾಸವಾಯಿತು. ಶರಣ ಬಂಧುಗಳು ಕೇಳಿದ ಪ್ರಶ್ನೆ, ಎತ್ತಿದ ಸಂದೇಹ, ನೀಡಿದ ವಿವರಣೆ ಅಪ್ರತಿಮವಾಗಿದ್ದವು. ದಿ. ೧೨ರಂದು ಎರಡೂ ಗೋಷ್ಠಿಗಳಲ್ಲಿ ಚರ್ಚಿಸಲ್ಪಟ್ಟ ವಿಷಯಗಳೆಂದರೆ :

೧. ಮುಂಬರುವ ೨೦೦೧ನೆಯ ಇಸವಿಯ ಜನಗಣತಿ ಸಲುವಾಗಿ ಪೂರ್ವಭಾವಿ ಸಿದ್ಧತೆ, ಜನಜಾಗರಣ ಕಾರ್ಯಕ್ರಮ.

೨. ಇಷ್ಟಲಿಂಗಧಾರಿಗಳ ಶರಣ ಸಮಾಜವನ್ನು ಲಿಂಗಾಯತ ಎಂದು ಸ್ಪಷ್ಟವಾಗಿ ಕರೆದು, ಅದೇ ರೀತಿ ಬರೆಸಲು ಹೇಳದೆ 'ವೀರಶೈವ' ಎಂದೂ ಬರೆಯಬಹುದು ಎಂದು ಜನರಲ್ಲಿ ಗೊಂದಲ ಉಂಟು ಮಾಡುತ್ತಿರುವ ಅಖಿಲ ಭಾರತ ವೀರಶೈವ ಮಹಾಸಭೆಯ ಧೋರಣೆ ಸರಿಯೆ ಮತ್ತು ಲಿಂಗಾಯತ-ವೀರಶೈವ ಇವುಗಳ ನಡುವಿನ ವ್ಯತ್ಯಾಸವೇನು ?

೩. ಲಿಂಗಾಯತ ಧರ್ಮದಲ್ಲಿ ಯೋಗಿರಾಜ ಶಿವನ ಸ್ಥಾನ.

೪. ಅ. ಬಸವಣ್ಣನ ಗುಡಿಗಳಲ್ಲಿ ನಂದಿಯ ಬದಲು ಪುರುಷಾಕಾರದ ಬಸವಣ್ಣನವರ ಮೂರ್ತಿಯ ಪ್ರತಿಷ್ಠಾಪನೆ.
   ಆ. ಶರಣರ ಗದ್ದುಗೆಗಳ ಸಂರಕ್ಷಣೆ.
   ಇ. ಏಕದೇವೋಪಾಸನೆ, ಏಕಗುರೂಪಾಸನೆ ಮತ್ತು ಇನ್ನಿತರ ಶರಣರು - ಶಿವಯೋಗಿಗಳ ಆರಾಧನೆಯಲ್ಲಿ ಅನುಸರಿಸಬೇಕಾದ ಕ್ರಮ

೫. ಬಸವ ಧರ್ಮ ಪೀಠಕ್ಕೆ ಅಧಿಕಾರಿಗಳನ್ನು ಆಯ್ಕೆ ಮಾಡುವಾಗ ಯಾವ ಮಾದರಿಯನ್ನು ಅನುಸರಿಸಬೇಕು ?

೬. ಭಾರತ ದೇಶವು ಹಲವಾರು ಧರ್ಮಗಳ ತಾಯ್ನೆಲವಾಗಿದೆ. ಭಾರತದ ಹೊರಗೆ ಹುಟ್ಟಿರುವ ಅನೇಕ ಧರ್ಮಗಳಿಗೆ ಆಶ್ರಯ ನೀಡಿದೆ. ಈಗ ಮತಾಂತರ ಕುರಿತು ವ್ಯಾಪಕವಾದ ಚರ್ಚೆಯಾಗುತ್ತಿದೆ. ಇಂಥ ಸನ್ನಿವೇಶದಲ್ಲಿ ಭಾರತೀಯರ ಒಲವು ನಿಲುವು ಏನಿರಬೇಕು ? ಸ್ವತಂತ್ರ ಧರ್ಮಾನುಯಾಯಿಗಳಾದ ಲಿಂಗಾಯತರ ನಿಲುವು ಮತ್ತು ಕರ್ತವ್ಯವೇನು ?

೭. ಜಾತಿ, ವರ್ಣ, ವರ್ಗರಹಿತ, ಧರ್ಮ ಸಹಿತ ಆದರ್ಶ ಸಮಾಜ ರಚನೆಯಲ್ಲಿ ಬಸವ ತತ್ತ್ವಾನುಯಾಯಿಗಳ ಜವಾಬ್ದಾರಿ ಏನು ?

೮. ಮೆರವಣಿಗೆ, ಪಥ ಸಂಚಲನ, ಶವಯಾತ್ರೆಗಳಲ್ಲಿ ಇರಬೇಕಾದ ಶಿಸ್ತು, ಸಾತ್ವಿಕತೆ, ಮಾಡಬೇಕಾದ ಘೋಷಣೆ. ಇತ್ಯಾದಿ;

ಶರಣ ಮೇಳ ಉದ್ಘಾಟನಾ ಸಮಾರಂಭ

ಗುರುವಾರ ದಿ. ೧೩-೧-೨೦೦೦ ದಂದು ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ

ಗಂಗಾದೇವಿಯವರು ಬಸವ ಧ್ವಜಾರೋಹಣ ನೆರವೇರಿಸಿದರು. ಹುಬ್ಬಳ್ಳಿ - ಧಾರವಾಡ ಮಹಾನಗರಪಾಲಿಕೆಯ ಉಪ ಮಹಾಪೌರರಾದ ಶರಣ. ದೀಪಕ್ ಚಿಂಚೋರೆಯವರು ಶರಣ ಮೇಳದ ಉದ್ಘಾಟನೆ ಮಾಡಿದರು. ಮುಂಬಯಿಯ ಬಿಲ್ಡರ್ಸ್ ಮತ್ತು ಅಖಿಲ ಭಾರತ ಏಳನೆಯ ಬಸವ ಧರ್ಮ ಸಮ್ಮೇಳನ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶರಣ. ಆರ್. ಬಿ. ಹೆಬ್ಬಳ್ಳಿಯವರು ೨೦೦೦ ಇಸವಿಯ ದಿನದರ್ಶಿಯ ಜೇಬಿನ ಆವೃತ್ತಿಯನ್ನು ಬಿಡುಗಡೆ ಮಾಡಿದರು. ಕೆ.ಆರ್.ನಗರ ತಾಲ್ಲೋಕಿನ ಶ್ರೀರಾಮ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾದ ಶರಣ. ಎ. ಎಸ್. ಚನ್ನಬಸಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕೊಪ್ಪಳದಲ್ಲಿ ರಾಷ್ಟ್ರೀಯ ಬಸವ ದಳಕ್ಕೆ 60 x 40 ಅಡಿಯ ನಿವೇಶನವನ್ನು ದಾನವಾಗಿ ಕೊಟ್ಟಿರುವ ಶರಣ. ವೀರಭದ್ರಪ್ಪ ಕೊರ್ಲಳ್ಳಿಯವರನ್ನು ಸನ್ಮಾನಿಸಲಾಯಿತು. ಕೊಪ್ಪಳದ ಮಾಜಿ ಶಾಸಕರು ಬಸವ ಧರ್ಮ ಪೀಠದ ಸರ್ವಜ್ಞ ಶರಣ ಧಾಮದಲ್ಲಿ ೮೧,೦೦೦ ರೂ. ಕೊಟ್ಟು ಡಬ್ಬಲ್ ಕೋಣೆ ಕಟ್ಟಿಸಲು ನೆರವು ನೀಡಿರುವ ಶರಣ. ಮಲ್ಲಿಕಾರ್ಜುನಪ್ಪ ದಿವಟರ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಬೀದರ್ ಮತ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿರುವ ಶರಣ ರಮೇಶ್‌ಕುಮಾರ್ ಪಾಂಡೆ, ದಾನಿಗಳಾದ ಶರಣ. ಮಲ್ಲಿಕಾರ್ಜುನಪ್ಪ ದಿವಟರ್ ಅವರನ್ನು ಶಾಲು ಹೊದ್ದಿಸಿ ಗೌರವಿಸಲಾಯಿತು.

ಬಸವ ಧರ್ಮದ ಮಹಾಜಗದ್ಗುರು ಪೀಠ

ಒಂಭತ್ತನೆಯ ಪೀಠಾರೋಹಣೋತ್ಸವ

ಬಸವ ಪೀಠವು ಎದ್ದು / ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು / ಧರೆಯವಗೆ
ವಶವಾಗದಿಹುದೆ ಸರ್ವಜ್ಞ ॥   ಎನ್ನುತ್ತದೆ ಸರ್ವಜ್ಞವಾಣಿ

ಧರ್ಮಪಿತ ಶ್ರೀ ಗುರು ಬಸವ ತಂದೆಯ ದಿವ್ಯ ಪ್ರೇರಣೆಯಂತೆ ಅವರು ಐಕ್ಯರಾದ ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಬಸವ ಶಕೆ ೮೫೮, ಸೋಮವಾರ ೧೩-೧-೧೯೯೨ರಂದು ಸಂಸ್ಥಾಪನೆ ಮಾಡಲಾಯಿತು. ಇದರ ಉದ್ದೇಶ ಬಸವ ತತ್ತ್ವದ ಪ್ರಚಾರ, ಸಮಾನತೆಯ ಪ್ರತಿಪಾದನೆ, ಜಾತಿ, ವರ್ಣ, ವರ್ಗ ಭೇದವಿಲ್ಲದೆ ಎಲ್ಲ ಮಾನವರ ಹಕ್ಕುಗಳನ್ನು ರಕ್ಷಿಸುವುದು; ಧರ್ಮನಿಷ್ಠೆ-ರಾಷ್ಟ್ರ ಪ್ರೇಮಗಳನ್ನು ಜನರಲ್ಲಿ ಬೆಳೆಸುವುದು, ಸಕಲ ಜೀವಾವಳಿಗೆ ಲೇಸನ್ನೇ ಬಯಸಿ, ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಕಲ್ಯಾಣ ರಾಜ್ಯವನ್ನು ಕಟ್ಟುವುದು. ಇಂತಹ ಧರ್ಮಪೀಠವನ್ನು ಅಪೂರ್ವ ವಾಗ್ಮಿಗಳು, ಕ್ರಾಂತಿಕಾರಿ ಧರ್ಮ ಪ್ರಸಾರಕರು ಬಸವ ಯುಗ ನಿರ್ಮಾಪಕರೂ ಆದ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು** ಪ್ರಥಮ ಪೀಠಾಧೀಶರಾಗಿ ಆರೋಹಣ ಮಾಡಿ, ಅಪಾರ ಕಾರ್ಯ ಸಾಧನೆಗೈದು ದಿ. ೩೦-೬-೧೯೯೫ ರಂದು ಲಿಂಗೈಕ್ಯರಾಗಿ ಕ್ರಿಯಾವಿಶ್ರಾಂತಿಯನ್ನು ಹೊಂದಿದರು. ಪೂಜ್ಯ ಮಹಾಜಗದ್ಗುರುಗಳ ಸದಿಚ್ಛೆಯಂತೆ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಪೀಠದ ಪ್ರಥಮ ಮಹಿಳಾ ಜಗದ್ಗುರುವಾದ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು** ಬಸವ ಧರ್ಮದ ಮಹಾಜಗದ್ಗುರು ಪೀಠದ ಎರಡನೆಯ ಅಧಿಕಾರಿಯಾಗಿ ಬಸವ ಶಕೆ ೮೬೨, ಶನಿವಾರ ದಿ.೧೩-೧-೧೯೯೬ ರಂದು ಬೆಳಿಗ್ಗೆ ೧೦-೩೦ಕ್ಕೆ ಸತ್ ಸಂಕಲ್ಪದೊಡನೆ ಬಸವ ಧ್ವಜಾರೋಹಣ ಮಾಡಿ ಪೀಠಾರೋಹಣ ಮಾಡಿದ್ದಾರೆ. ಇದೀಗ ಪೀಠ ಸ್ಥಾಪನೆಯ ೯ನೆಯ ವಾರ್ಷಿಕೋತ್ಸವವನ್ನು ದಿ. ೧೩ ರಂದು ಆಚರಿಸಲಾಯಿತು. ಮಹಾರಾಷ್ಟ್ರದ ಉದಗೀರಿನ ಶಾಸಕರಾದ ಶರಣ. ಗೋವಿಂದರಾವ್ ಕೇಂದ್ರೆಯವರು ಪೀಠಾರೋಹಣ

ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶರಣ. ಮಲ್ಲಿಕಾರ್ಜುನಪ್ಪ ದಿವಟರ್ ಅತಿಥಿಗಳಾಗಿ ಉಪಸ್ಥಿತರಿದ್ದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಪ್ರಾಸ್ತಾವಿಕ ಭಾಷಣ ಮಾಡಿ ಪೂಜ್ಯ ಮಾತಾಜಿಯವರ ದಿವ್ಯ ಜೀವನ, ಸಾಧನೆ, ಸಂದೇಶ ಕುರಿತು ವಿವರಿಸಿದರು. ಷಟ್‌ಸೂತ್ರ ಸಹಿತವಾದ ಧರ್ಮಪೀಠದ ಮೇಲೆ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನಿಟ್ಟು ಅರ್ಚಿಸಿ, ಪುಷ್ಪವೃಷ್ಟಿ ಮಾಡಿ, ನಂತರ ಪ್ರಥಮ ಪೀಠಾಧೀಶರಾದ ಲಿಂಗೈಕ್ಯ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಭಾವಚಿತ್ರವನ್ನಿಟ್ಟು ಪುಷ್ಪವೃಷ್ಟಿ ಮಾಡಲಾಯಿತು. ಆನಂತರ ಪೂಜ್ಯ ಮಾತಾಜಿಯವರು ಧ್ವಜಾರೋಹಣ ಮಾಡಿ, ಪೀಠವನ್ನು ಏರಿದರು. ಪೂಜ್ಯ ಗಂಗಾ ಮಾತಾಜಿಯವರು ರುದ್ರಾಕ್ಷಿ ಕಿರೀಟವನ್ನು ಇರಿಸಿದ ಮೇಲೆ ವಿವಿಧ ಶರಣ ಬಂಧುಗಳು ಮಾಲಾರ್ಪಣೆ ಮಾಡಿ, ತಮ್ಮ ತಮ್ಮ ಭಕ್ತಿಯ ಕಾಣಿಕೆಯನ್ನು, ಕೊಡುಗೆಗಳನ್ನು ಸಮರ್ಪಿಸಿದರು. ಪುಷ್ಪವೃಷ್ಟಿ ಮಾಡಿ, ಆರತಿಯನ್ನು ಮಾಡಲಾಯಿತು. ಪೂಜ್ಯ ಮಾತಾಜಿಯವರು ಪೀಠಾರೋಹಣದ ಸಂದೇಶವನ್ನು ನೀಡಿದರು. ವಚನ ಲೇಖನ ವ್ರತದ ಪುಸ್ತಕವನ್ನು, ಬಸವ ದರ್ಶನ ಕೃತಿಯನ್ನು ಬಿಡುಗಡೆ ಮಾಡಿ ''ವಚನಗಳನ್ನು ಬರೆಯುವ ಪವಿತ್ರ ನಿಯಮವನ್ನು ಎಲ್ಲರೂ ಹಾಕಿಕೊಳ್ಳಬೇಕು. ಮೊದಲನೆಯ ಪುಸ್ತಕವನ್ನು ಇಲ್ಲಿಂದ ಒಯ್ದು ಶರಣ ಮೇಳದಿಂದ ಹೋಗುತ್ತಲೇ ಬರೆಯಲು ಆರಂಭಿಸಿರಿ. ವರ್ಷಪೂರ್ತಿ ಎಷ್ಟು ಸಾಧ್ಯವೋ ಅಷ್ಟು ಬರೆಯಿರಿ. ಹಿಂದೆಲ್ಲ ಮಂತ್ರವನ್ನು ಬರೆಯುವ ಪರಿಪಾಠ ಕೆಲವರು ಇಟ್ಟುಕೊಂಡಿದ್ದರು. ಮಂತ್ರ ಬರೆಯುವಲ್ಲಿ ತಪಸ್ಸಿದೆ; ವಚನಗಳನ್ನು ಬರೆಯುವಲ್ಲಿ ತಪಸ್ಸಿನೊಡನೆ ಜ್ಞಾನಪ್ರಾಪ್ತಿಯೂ ಇದೆ'' ಎಂದರು. ''ದಿನ ನಿತ್ಯ ಪೂಜೆ ಆಗುತ್ತಲೇ ವಚನಗಳನ್ನು ಪಠಿಸುವ, ಬರೆಯುವ ಪದ್ಧತಿ ರೂಢಿಸಿಕೊಳ್ಳಿರಿ. ಬಸವ ವಚನ ದೀಪ್ತಿ, ಬಸವ ದರ್ಶನ ಈ ಪಠಣ - ಲೇಖನಕ್ಕೆ ಸೂಕ್ತ ಗ್ರಂಥಗಳು.'' ಎಂದೂ ಪೂಜ್ಯರು ತಿಳಿಸಿದರು. ''ಶರಣ ವ್ರತ'' ವನ್ನು ಸ್ವೀಕರಿಸಿ ಬಂದಿರುವ ಶರಣರನ್ನು ಅಭಿನಂದಿಸಿ ಮಾತನಾಡಿದ ಪೂಜ್ಯರು ವರ್ಷದಿಂದ ವರ್ಷಕ್ಕೆ ಶರಣ ವ್ರತವನ್ನು ಸ್ವೀಕರಿಸುವವರ ಸಂಖ್ಯೆ ಜಾಸ್ತಿಯಾಗುತ್ತ ಹೋಗಬೇಕು ಎಂದು ತಿಳಿಸಿ, ೪೦,೩೦,೨೦,೧೦ ದಿವಸಗಳ ವ್ರತ ಸ್ವೀಕರಿಸಿದ ಶರಣರು ಬಸವ ಧರ್ಮ ಸಂಸ್ಥಾಪನಾ ದಿನವಾದ ಜನವರಿ ೧೪ ರಂದು ಸುಪ್ರಭಾತದಲ್ಲಿ ಗಣಲಿಂಗ ದರ್ಶನ ಪಡೆದು, ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಗಳಾಗಿ, ಪಥ ಸಂಚಲನದಲ್ಲಿ ಭಾಗಿಗಳಾಗಿ, ಸಾಮೂಹಿಕ ಲಿಂಗಪೂಜೆ ಪೂರೈಸಿ, ಕರುಣೋದಕ - ಕರುಣಪ್ರಸಾದವನ್ನು ಸ್ವೀಕರಿಸಿದಾಗ ಶರಣ 'ವ್ರತವು ಪೂರ್ತಿಗೊಳ್ಳುತ್ತದೆ.'' ಎಂದು ತಿಳಿಸಿದರು.

ಗಣಲಿಂಗ ದರ್ಶನ ಮತ್ತು ಪ್ರತಿಜ್ಞಾವಿಧಿ

ಶರಣ- ಮೇಳ ಯಾತ್ರಾರ್ಥಿಯ ಪವಿತ್ರ ವಿಧಿ ಗಣಲಿಂಗ ದರ್ಶನ. ಧರ್ಮಕ್ಷೇತ್ರ ಕೂಡಲಸಂಗಮಕ್ಕೆ ಆಗಮಿಸಿ, ಗಣಲಿಂಗದ ಮೇಲೆ ಪ್ರತಿಫಲನಗೊಂಡ ಜ್ಯೋತಿರ್ಬಿಂದುವಿನ ದರ್ಶನ ಮಾಡಿ ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸಬೇಕು. ಹೀಗೆ ಗಣಲಿಂಗ ದರ್ಶನ ಎಲ್ಲರಿಗೂ ಲಭ್ಯ. ಆದರೆ ಗಣಲಿಂಗದ ಸಮೀಪಕ್ಕೆ ಹೋಗಿ, ಅದನ್ನು ಸ್ಪರ್ಶಿಸಲು ಏಕದೇವೋಪಾಸಕರಾಗುವ ಪ್ರತಿಜ್ಞೆ ಮಾಡುವವರಿಗೆ ಮಾತ್ರ ಸಾಧ್ಯ. ಆದ್ದರಿಂದ ತತ್ತ್ವನಿಷ್ಠರೂ ಏಕದೇವೋಪಾಸಕರಾಗಬಯಸುವವರೂ ಐಚ್ಛಿಕ (Optional) ವಿಧಿಯನ್ನಾಗಿ ಇದನ್ನು ಪಾಲಿಸಬೇಕು.

ಶರಣ ಮೇಳ - ಬಸವ ಧರ್ಮ ಸಂಸ್ಥಾಪನಾ ದಿನಾಚರಣೆ

ಧರ್ಮಪಿತ ಬಸವಣ್ಣನವರ ಜೀವನದಲ್ಲಿ ಯುವನಾಮ ಸಂವತ್ಸರವು ಬಲು ಮಹತ್ವಪೂರ್ಣ.

ಅಲ್ಲಿಗೆ ಮೂರೇಳು (೨೧) ವಯಸ್ಸಿನ ತರುಣರಾಗಿದ್ದ ಧರ್ಮಕರ್ತರ ಹೃನ್ಮನ ಬುದ್ಧಿಗಳಲ್ಲಿ ಸ್ವತಂತ್ರ ಧರ್ಮವೊಂದರ ನೀಲನಕ್ಷೆ ಮೂಡಿತ್ತು. ಯುವ ನಾಮ ಸಂವತ್ಸರದ (೧೧೫೫) ಪುಷ್ಯಮಾಸದ ಮಕರಸಂಕ್ರಾಂತಿಯಂದು (ದಿ. ೧೪.೧.೧೧೫೫) ಅವರ ಜೀವನವು ಮಹತ್ವದ ತಿರುವು ಪಡೆದುಕೊಂಡ ದಿನ. ಅದು ಬಸವ ಕ್ರಾಂತಿ ದಿನ.

ಅದು ಬಸವ ಧರ್ಮ ಸಂಸ್ಥಾಪನಾ ದಿನವೂ ಅಹುದು. ಪುರೋಹಿತಶಾಹಿ, ಗುಡಿಶಾಹಿಯನ್ನು ಪ್ರತಿಭಟಿಸಿ ಜನ ಸಾಮಾನ್ಯರನ್ನು ದೇವಾಲಯದೊಳಗೆ ಕರೆದೊಯ್ದು ಪೂಜೆ ಮಾಡಿಸಿದ ದಿನವೂ ಅಹುದು. ದೇವಸಾಕ್ಷಾತ್ಕಾರ ಹೊಂದಿ ಇಷ್ಟಲಿಂಗದ ಪರಿಕಲ್ಪನೆ ನೀಡಿದ ದಿನವೂ ಅಹುದು. ಅಂಥ ಪವಿತ್ರ ದಿನದಂದು ಶರಣ ಮೇಳದ ಯಾತ್ರಿಯು ಕೆಲವು ಪವಿತ್ರ ವಿಧಿಗಳನ್ನು ಪೂರೈಸಬೇಕು. ಕೆಲವೊಂದು ಕರ್ತವ್ಯ ನಿರ್ವಹಿಸಬೇಕು.

೧. ಗಣಲಿಂಗ ದರ್ಶನ ಮತ್ತು ಸ್ಪರ್ಶನ
೨. ಧ್ವಜಾರೋಹಣ ಮತ್ತು ಗುರು ವಂದನ
೩. ಶರಣ-ಸಂಗಮ, ಸಮುದಾಯ ಪ್ರಾರ್ಥನೆ
೪. ಕುಸುರೆಳ್ಳು ವಿನಿಯೋಗ
೫. ವಚನ ಪಠಣ
೬. ಬಸವ ಐಕ್ಯಮಂಟಪ ದರ್ಶನ
೭. ಪಥ ಸಂಚಲನ, ಮೆರವಣಿಗೆ
೮. ಸಾಮೂಹಿಕ ಲಿಂಗಪೂಜೆ

ಈ ಎಂಟು ವಿಧಿಗಳಲ್ಲಿ ಭಾಗಿಯಾಗಲೇಬೇಕು

ಜನವರಿ ೧೪ರಂದು ಸುಪ್ರಭಾತದಲ್ಲಿ ಎದ್ದು ಸ್ನಾನ-ಇಷ್ಟಲಿಂಗಾರ್ಚನೆ ಪೂರೈಸಿ ಎಲ್ಲ ಶರಣ ಬಂಧುಗಳು ಗುರು(ಬಸವಣ್ಣ) - ಲಿಂಗದೇವ (ಗಣಲಿಂಗ) - ಜಂಗಮ (ಎಲ್ಲ ಶರಣರು)ದ ದರ್ಶನ ಪಡೆಯಬೇಕು. ಗಣಲಿಂಗದ ದರ್ಶನವು ಎಲ್ಲರಿಗೂ ಲಭ್ಯ. ಏಕದೇವೋಪಾಸನೆಗೆ ಬದ್ಧರಾಗಿ ಇಷ್ಟಲಿಂಗ ನಿಷ್ಠರಾಗಿರುವವರು ಮಾತ್ರ ಗಣಲಿಂಗದ ಸ್ಪರ್ಶನ ಮಾಡಿ, ಪ್ರತಿಜ್ಞಾಬದ್ಧರಾಗಬೇಕು. ಧ್ವಜಾರೋಹಣ, ಗುರುವಂದನೆಯಲ್ಲಿ ಭಾಗಿಗಳಾದ ನಂತರ ಸಮುದಾಯ ಪ್ರಾರ್ಥನೆಯಲ್ಲಿ, ವಚನ ಪಠಣದಲ್ಲಿ ಭಾಗಿಗಳಾಗಬೇಕು. ಪ್ರಸಾದದ ನಂತರ ಮೆರವಣಿಗೆ/ಪಥಸಂಚಲನವಿರುತ್ತದೆ. ಶರಣ ಲೋಕದಲ್ಲಿರುವ ಮಹಾಮನೆ ಮಹಾಮಠದಿಂದ ಬಸವೇಶ್ವರ ಐಕ್ಯಮಂಟಪದವರೆಗೆ ಸಾಗಿ, ಅಲ್ಲಿಂದ ಮಹಾಮನೆ ಮಹಾಮಠದವರೆಗೆ ಪಥ ಸಂಚಲನ ಮಾಡಬೇಕು. ಬಸವೇಶ್ವರ ಲಿಂಗೈಕ್ಯ ಮಂಟಪದಲ್ಲಿ ಜ್ಯೋತಿಯನ್ನು ಹಚ್ಚಿಕೊಂಡು ಮೆರವಣಿಗೆಯೊಡನೆ ಬಸವ ಜ್ಯೋತಿಯನ್ನು ಪಥ ಸಂಚಲನದಲ್ಲಿ ತರಬೇಕು. ಓಂ ಲಿಂಗಾಯ ನಮಃ ಎಂಬ ಸೃಷ್ಟಿಕರ್ತನ ಮಂತ್ರವನ್ನು, ಓಂ ಶ್ರೀ ಗುರು ಬಸವ ಲಿಂಗಾಯನಮಃ ಎಂಬ ಗುರುಮಂತ್ರವನ್ನು ಪಠಿಸುತ್ತ ಜಯಘೋಷ ಮಾಡುತ್ತ,

ಬಸವ ಲಿಂಗ ಬಸವ ಲಿಂಗ ಬಸವ ಲಿಂಗ ಪಾಹಿಮಾಂ
ಬಸವ ಲಿಂಗ ಬಸವ ಲಿಂಗ ಬಸವ ಲಿಂಗ ರಕ್ಷಮಾಂ
ಬಸವಲಿಂಗ ಲಿಂಗದೇವ, ಬಸವಲಿಂಗ ಲಿಂಗದೇವ
ಬಸವಲಿಂಗ ಲಿಂಗದೇವ, ಬಸವಾಲಿಂಗ ಲಿಂಗದೇವ

ಎಂದು ಭಜನೆ ಮಾಡುತ್ತ ಪಾದಯಾತ್ರೆಯಲ್ಲಿ ಸಾಗಬೇಕು. ಲೋಕ ಕಲ್ಯಾಣಾರ್ಥವಾಗಿ ಸತ್‌ಸಂಕಲ್ಪ ಕೈಗೊಂಡು ನಂತರ ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಭಾಗಿಗಳಾಗಬೇಕು. ಇದು ನಿಯಮದಿಂದ ನಡೆಯುತ್ತದೆ.

ಬಸವ ಧರ್ಮ ಸಂಸ್ಥಾಪನಾ ದಿನ ಕಾರ್ಯಕ್ರಮ ವಿವರ

ಪ್ರತಿ ವರ್ಷವೂ ಸುಪ್ರಭಾತದಲ್ಲಿ ಮೆರವಣಿಗೆ, ಪಥ ಸಂಚಲನ ನಡೆಯುತ್ತಿತ್ತು. ಜನರು ಹಾಡುತ್ತ, ಕುಣಿಯುತ್ತ ತಡವಾಗಿ ಬಂದು ಸೇರಿ ಪ್ರಾರ್ಥನೆ ಆರಂಭಿಸುವಲ್ಲಿ ವಿಳಂಬವಾಗುತ್ತಿತ್ತು. ಹೀಗಾಗಿ ಸಮುದಾಯ ಪ್ರಾರ್ಥನೆಯೇ ಅತ್ಯಂತ ಮುಖ್ಯವಾದ ವಿಧಿಯಾದ್ದರಿಂದ ಇದಕ್ಕೆ ಮಹತ್ವ ಕೊಡಲು ಪೂಜ್ಯ ಮಾತಾಜಿಯವರು ಸಮುದಾಯ ಪ್ರಾರ್ಥನೆಯನ್ನು ಬೆಳಿಗ್ಗೆ ಇರಿಸಿ ಪಥ ಸಂಚಲನವನ್ನು ಸಂಜೆಗೆ ಇಟ್ಟರು. 845ನೆಯ ಬಸವ ಧರ್ಮ ಸಂಸ್ಥಾಪನಾ ದಿನ 14-1-2000 ದಂದು ಸುಪ್ರಭಾತದಲ್ಲಿ ಶರಣ ವ್ರತಿಗಳು ಸ್ನಾನ ಪೂಜೆ ಪೂರೈಸಿ ಶರಣ ಲೋಕದಲ್ಲಿರುವ ಗಣಲಿಂಗ ದರ್ಶನವನ್ನು ಪಡೆದರು. ಗಣ ಧ್ವಜಾರೋಹಣವು ಗಡಹಿಂಗ್ಲಾಜದ ಶರಣ ಕೃಷ್ಣಪ್ಪ ಭರಮಪ್ಪ ಮುಸಳೆ ಇವರಿಂದ ನೆರವೇರಿದ ಬಳಿಕ ಶರಣರು ಪಥ ಸಂಚಲನದಲ್ಲಿ ಸಭಾ ಮಂಟಪಕ್ಕೆ ತೆರಳಿದರು. ಆದಿ ಗುರು ಬಸವಣ್ಣನವರ ಪೂಜೆಯನ್ನು ವಚನ ಪಠಣ ಮಾಡುವ ಷಡ್‌ಗಣಾಧೀಶರು ನೆರವೇರಿಸಿದ ನಂತರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶರಣೆ ಶ್ರೀಮತಿ ರಾಣಿ ಸತೀಶ್ ಅವರು ಸಮುದಾಯ ಪ್ರಾರ್ಥನಾ ಕಾರ್ಯಕ್ರಮವನ್ನು ದೀಪೋಜ್ವಲನ ಮಾಡಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ವಿರೋಧ ಪಕ್ಷದ ನಾಯಕರಾದ ಶರಣ ಜಗದೀಶ್ ಶೆಟ್ಟರ್ ಅವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಮಾಜಿ ಮಹಾಪೌರರು, ಹಿರಿಯ ನ್ಯಾಯವಾದಿಗಳೂ ಆದ ಎಸ್. ಎಸ್. ಶೆಟ್ಟರ್ ವಹಿಸಿದ್ದರು. ಸಮುದಾಯ ಪ್ರಾರ್ಥನೆಯನ್ನು, ವಚನ ಪಠಣವನ್ನು, ಪ್ರತಿಜ್ಞೆಯನ್ನು ಬಸವ ಧರ್ಮ ಪೀಠಾಧೀಶರಾದ ಪೂಜ್ಯ ಶ್ರೀ ಮಾತಾಜಿ ನೆರವೇರಿಸಿದರು. ಜಗನ್ಮಾತಾ ಅಕ್ಕಮಹಾದೇವಿ ಪೀಠದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು, ಬೆಂಗಳೂರು ಬಸವ ಮಂಟಪದ ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು, ಬಸವ ಗಂಗೋತ್ರಿಯ ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಗೋಕಾಕ್ ಬಸವ ಮಂಟಪದ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಬಸವ ಧರ್ಮ ಪೀಠದ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ವಚನ ಪಠಣ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಧಾರ್ಮಿಕ ಸಹೋದರತ್ವದ ಪ್ರತೀಕವಾಗಿ ಕುಸುರೆಳ್ಳನ್ನು ಹಂಚಲಾಯಿತು.

ಮೆರವಣಿಗೆ - ಪಥ ಸಂಚಲನ - ಸಾಮೂಹಿಕ ಲಿಂಗಾರ್ಚನೆ

ಮಧ್ಯಾಹ್ನದ ಪ್ರಸಾದ ಸ್ವೀಕಾರದ ನಂತರ ಶರಣ ಬಂಧುಗಳು ಬಸವೇಶ್ವರ ಐಕ್ಯಮಂಟಪದತ್ತ ಸಾಗಿದರು. ಪೂಜ್ಯ ಶ್ರೀ ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ಪೂಜ್ಯ ಸ್ವಾಮಿಗಳವರು, ಗಣನಾಯಕ-ನಾಯಕಿಯರು ಐಕ್ಯ ಮಂಟಪದಲ್ಲಿ ಪೂಜೆ ಸಲ್ಲಿಸಿ ಪಾದಯಾತ್ರೆಯಲ್ಲಿ ಸಾಗಿದರು. ಬೆಂಗಳೂರಿನ ಸುಮಂಗಲಿ ಸೇವಾಶ್ರಮದ ಬಾಲಕಿಯರ ಬ್ಯಾಂಡ್‌ಸೆಟ್ ಮೆರವಣಿಗೆಗೆ ವಿಶೇಷ ಕಳೆ ನೀಡಿತ್ತು. ವಿವಿಧ ರಾಜ್ಯಗಳಿಂದ ಬಂದ ರಾಷ್ಟ್ರೀಯ ಬಸವ ದಳದವರ ಬ್ಯಾನರ್‌ಗಳು ಚಿತ್ತಾಕರ್ಷಕವಾಗಿದ್ದವು. ಮಹಾರಾಷ್ಟ್ರದ ಉದಗೀರ್‌ನ ಶರಣೆಯರ ಕೋಲಾಟ, ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿ-ಸಕಲಟ್ಟಿಯವರ ಸಾತ್ವಿಕ-ಭಕ್ತಿಪೂರ್ವಕ ಭಜನೆ ಮತ್ತು ನರ್ತನ ನೋಡುಗರನ್ನು ಭಾವಪರವಶರನ್ನಾಗಿ ಮಾಡುತ್ತಿತ್ತು. ಉದ್ದಕ್ಕೂ ಮಂತ್ರ ಜಪ ಮಾಡುತ್ತ ಬರುವ ಶರಣ ವೃಂದ ಶಿಸ್ತಿನಿಂದ ಸಾಗುತ್ತಿತ್ತು. ಮೊದಲಿಗಿಂತಲೂ ನಾಲ್ಕು ಪಟ್ಟು ವಿಸ್ತಾರಗೊಂಡಿದ್ದರೂ ರಸ್ತೆಯು ಶರಣರಿಂದ ತುಂಬಿತುಳುಕುತ್ತಿತ್ತು. ಸಾತ್ವಿಕವೂ ಭಕ್ತಿಪೂರಕವೂ ಆದ ಮೆರವಣಿಗೆ, ಪಥ ಸಂಚಲನಗಳು ಬಹಳ ಪರಿಣಾಮವನ್ನು ಬೀರಿದವು.

ಶರಣ ವ್ರತಿಗಳಿಗೆ ಕಡ್ಡಾಯವಾಗಿರುವ ಇಷ್ಟಲಿಂಗಾರ್ಚನೆಯಲ್ಲಿ ಶರಣ ವ್ರತಿಗಳು ಮಾತ್ರವಲ್ಲದೆ ಇತರರೂ ಕುಳಿತು ಪೂಜೆ ಮಾಡಿದ್ದು ಚೇತೋಹಾರಿ ದೃಶ್ಯವಾಗಿತ್ತು. ಸಭಾ ಮಂಟಪವು ಬೃಹದಾಕಾರದಲ್ಲಿದ್ದರೂ ತುಂಬಿ ತುಳುಕುತ್ತಿತ್ತು. ಆಗ ಓರ್ವ ಶರಣೆ ಮಾತಾಜಿಯವರಿಗೆ ಹೇಳಿದರು, "ಎಲ್ಲರೂ ಪೂಜೆಗೆ ಕುಳಿತರೆ ಪೆಂಡಾಲ್ ಸಾಕಾಗದು ; ಮುಂದಿನ ವರ್ಷ ಇನ್ನೂ ಹೆಚ್ಚಿನ ಜನ ಶರಣ ವ್ರತ ಸ್ವೀಕರಿಸುತ್ತಾರೆ." ಎಂದು. ಆಗ ಪೂಜ್ಯ ಮಾತಾಜಿ, ನಗುತ್ತಾ ಹೇಳಿದರು, "ಬಸವಣ್ಣನ ಬಳ್ಳಿ ಹಬ್ಬುತ್ತಾ ಹೋಗಲಿ, ವರ್ಷದಿಂದ ವರ್ಷಕ್ಕೆ ಪೆಂಡಾಲ್ ವಿಸ್ತಾರಗೊಳಿಸುತ್ತೇವೆ. ಅದಕ್ಕಾಗಿಯೇ ಪುನಃ ಏಳೂವರೆ ಎಕರೆ ಜಮೀನು ಖರೀದಿಸಿದ್ದೇವೆ. ನೀವು ಹೆಚ್ಚು ಬಂದಷ್ಟು ನಮಗೆ ಸಂತೋಷ" ಎಂದು.

ಪೂಜೆಯ ನಂತರ, ಶರಣ ವ್ರತಿಗಳಾದ ಶರಣೆಯರ ಸಮೂಹಕ್ಕೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು, ಶರಣರ ಸಮೂಹಕ್ಕೆ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ಕರುಣೋದಕ-ಕರುಣ ಪ್ರಸಾದ ವಿತರಿಸಿದರು. ಧಾರವಾಡ ಗ್ರಾಮಾಂತರ ಮತಕ್ಷೇತ್ರದ ಶಾಸಕ ಶಿವಾನಂದ ಅಂಬಡಗಟ್ಟಿಯವರು ಆಗಮಿಸಿದಾಗ ಅವರನ್ನು ಸತ್ಕರಿಸಲಾಯಿತು. ತಮಿಳುನಾಡಿನ ಕಾಟೇರಿಯ ಶರಣರ ವಚನಗಳು, ಭಕ್ತಿಗೀತೆಗಳು, ಸುಮಂಗಲಿ ಸೇವಾಶ್ರಮದ ಮಕ್ಕಳ ವಚನೋತ್ಸವ ಮಾತೆ ವಚನೋತ್ಸವ ಎಂಬ ಪ್ರದರ್ಶನ, ಧಾರ್ಮಿಕ ರಸಪ್ರಶ್ನೆ ಕಾರ್ಯಕ್ರಮಗಳು ಮಧ್ಯರಾತ್ರಿಯವರೆಗೂ ನಡೆದವು.

ಮದುವೆಯ ಪ್ರಾತ್ಯಕ್ಷಿಕೆ ಮತ್ತು ಸಮಾರೋಪ ಸಮಾರಂಭ

ದಿ. 15ರಂದು ಡಾ|| ಅಂದಾನಪ್ಪ ಆದಿಯವರ ಮಗ ಶರಣ ಪ್ರಭು ಆದಿ ಮತ್ತು ಶರಣೆ ಅಕ್ಕಮಹಾದೇವಿಯವರ ವಿವಾಹವು ಜರುಗಲು ಶರಣ ಮೇಳ ಉತ್ಸವ ಸಮಿತಿಯವರು ಏರ್ಪಾಡು ಮಾಡಿದ್ದಲ್ಲದೆ, ಪೂಜ್ಯ ಶ್ರೀ ಮಾತಾಜಿಯವರು ಮದುವೆಯ ವಿಧಿವಿಧಾನಗಳನ್ನು ನೆರವೇರಿಸಿದರು. ಬಸವ ಧರ್ಮೀಯರು ಯಾವ ರೀತಿ ಮದುವೆಗಳನ್ನು ಸರಳವಾಗಿ, ತಾತ್ವಿಕವಾಗಿ, ಅರ್ಥಗರ್ಭಿತವಾಗಿ ನಡೆಸಲು ಬರುತ್ತದೆ ಎಂಬುದನ್ನು ತೋರಿಸಿದರಲ್ಲದೆ "ಜೀವ ಸಂಗಮ" ಎಂಬ ವಿವಾಹದ ಪ್ರಾತ್ಯಕ್ಷಿಕೆಯ ಧ್ವನಿಸುರುಳಿಯನ್ನೂ ಬಿಡುಗಡೆ ಮಾಡಿದರು. ಕನ್ನಡದಲ್ಲೇ ವಿವಾಹ ವಿಧಿ, ಪ್ರತಿಜ್ಞೆ, ಅಕ್ಷತಾರೋಪಣ ಮಂತ್ರ ಮುಂತಾದವು ನಡೆದು ಎಲ್ಲರಿಗೂ ಬಹಳ ಸಂತೋಷವೆನಿಸಿತು. ಆಗ ಒಬ್ಬರು ಹೇಳಿದರು "ಹೆಚ್ಚಿನ ಪಾಲು ಲಿಂಗಾಯತರಿಗೆ ಮದುವೆಯ ವಿಧಾನವೇ ತಿಳಿದಿಲ್ಲ. ಇಂದು ತೋರಿಸಿದ್ದರಿಂದ ಬಹಳ ತಿಳುವಳಿಕೆ ಬಂದಿತು. ಪ್ರತಿವರ್ಷ ಇಂಥ ಒಂದು ಪ್ರಾತ್ಯಕ್ಷಿಕೆ ಮಾಡಿ ತೋರಿಸಿರಿ." ಎಂದು ಮಾತಾಜಿಯವರಲ್ಲಿ ವಿನಂತಿ ಮಾಡಿದರು. ಹುಮ್ನಾಬಾದ್ ತಾಲ್ಲೋಕಿನ ಮತಕ್ಷೇತ್ರದ ಶಾಸಕ ಶರಣ ಸುಭಾಷ್ ಕಲ್ಲೂರ್ ಅವರು ಕುಟುಂಬ ಸಹಿತವಾಗಿ ಆಗಮಿಸಿದಾಗ ಅವರನ್ನೂ ಸತ್ಕರಿಸಲಾಯಿತು. ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಮಹತ್ವಪೂರ್ಣ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

13ನೆಯ ಶರಣ ಮೇಳವು ಯಾರ ವಿರೋಧವು ಇಲ್ಲದೆ (ವಿರೋಧಿಸಿದವರು ಸುಸ್ತಾಗಿದ್ದಂತೆ ತೋರುತ್ತದೆ) ಯಾವ ಅಪಸ್ವರವೂ ಇಲ್ಲದೆ ಸುಸೂತ್ರವಾಗಿ ನಡೆಯಿತಲ್ಲದೆ ಅತ್ಯಂತ ಅಚ್ಚುಕಟ್ಟಾಗಿ ಜರುಗಿತು. ಕಳೆದ ವರ್ಷಕ್ಕಿಂತಲೂ ಎರಡು ಪಟ್ಟು ಜನರು ಇದ್ದರೂ ಯಾವುದರಲ್ಲಿಯೂ ಕೊರತೆ ಕಾಣಿಸಲಿಲ್ಲ. ಸಭೆಯಲ್ಲಿ ಶಾಂತಿ, ಶಿಸ್ತು, ಏಕಾಗ್ರತೆ ಎದ್ದು ಕಾಣುತ್ತಿತ್ತು. ಪ್ರಸಾದ ವ್ಯವಸ್ಥೆ ಅಚ್ಚುಕಟ್ಟಾಗಿ ರುಚಿಕಟ್ಟಾಗಿ ಇದ್ದಿತು. ಕೊಡುಗೈ ದಾನಿಗಳು ಕೊಟ್ಟ ಸಕ್ಕರೆ-ಬೆಲ್ಲಗಳಿಂದಾಗಿ ಸಿಹಿ ಪದಾರ್ಥ, ಯಥೇಚ್ಛ ಬೇಳೆ-ತರಕಾರಿಗಳಿಂದಾಗಿ ರುಚಿಯಾದ ಸಾರು ಊಟದ ಸವಿಯನ್ನು ಹೆಚ್ಚಿಸಿದವು,

ಜ್ಞಾನದ ಊಟ ಪರಮ ತೃಪ್ತಿಯನ್ನು ನೀಡದರೆ, ವರ್ಷಕ್ಕೊಮ್ಮೆ ಸಿಕ್ಕುವ ಪರಿಚಿತ ಶರಣರ ಒಡನಾಟ ಅಪಾರ ಸಂತೋಷವನ್ನು ನೀಡುತ್ತದೆ. ಹಗಲುರಾತ್ರಿಗಳು ಬೇಗಬೇಗನೆ ಓಡುತ್ತ ನಾಲ್ಕು ದಿವಸ ಕಳೆದುದೇ ತಿಳಿಯದು. ಶರಣ ಮೇಳ ಮುಗಿದು ಊರ ಕಡೆ ಹೊರಡುವ ಬಸ್ಸು ಹತ್ತಿದಾಗ ಏನೋ ವ್ಯಥೆ. ನಾಲ್ಕು ದಿವಸ ಎಷ್ಟು ಬೇಗನೇ ಮುಗಿದವಲ್ಲ ಎನ್ನಿಸುತ್ತದೆ. ಶರಣಲೋಕದಲ್ಲಿ ಇರಿಸುವ ಈ ನಾಲ್ಕು ದಿನಗಳಿಗಾಗಿ 361 ದಿವಸ ಕಾಲ ಕಾಯಬೇಕಲ್ಲ ಎಂಬ ನೋವು. ಆದರೆ ಆ ನಾಲ್ಕು ದಿನಗಳ ನೆನಪೇ ಅದ್ಭುತ ಸ್ಫೂರ್ತಿ ಕುಂಡ.

ವರದಿ - ಶೈಲಾ ಪರಮಾದಿ, ಹುಬ್ಬಳ್ಳಿ

ಸ್ಫುರಣ - ಕಿರಣ

ಒರಿಜಿನಲ್ ಮತ್ತು ಲಟಕಾ ಟೇಪ್ ರೆಕಾರ್ಡರ್ ಧ್ವನಿ

ಶರಣ ಮೇಳಕ್ಕೆ ಹೊಸ ಧ್ವನಿ ಸುರುಳಿಗಳನ್ನು ಸಿದ್ಧಪಡಿಸಬೇಕು ಎಂದು, ಅತ್ಯುತ್ಸಾಹದಿಂದ ಊಟ-ನಿದ್ದೆಗಳ ಎಣಿಕೆಯಿಲ್ಲದೆ ಕೆಲಸ ಮಾಡಿದೆ. ಬಹಳ ಚೆನ್ನಾಗಿ ಬಂದುದನ್ನು ಕೇಳುತ್ತ ಹರ್ಷಿಸಿ, ದಣಿವನ್ನು ಮರೆತು ಬಿಡುತ್ತಿದ್ದೆ. ಸ್ಟುಡಿಯೋದ ಸ್ಪೀಕರ್‌ಗಳಲ್ಲಂತೂ ಅದ್ಭುತವಾಗಿ ಬರುತ್ತದೆ. ಸಿದ್ಧರಾಮೇಶ್ವರರ ಸ್ತೋತ್ರ ತ್ರಿವಿಧಿ ಕೇಳುತ್ತ ಆನಂದಬಾಷ್ಪ ಹರಿಯುತ್ತಿದ್ದುದುಂಟು. ಎಲ್ಲ ಸಿದ್ಧವಾಗಿ ಪ್ರತಿಗಳನ್ನು ಮಾಡಲು ಆರ್ಡರ್ ಕೊಟ್ಟು, ಅವೂ ಬಂದವು. ಆಗ ನಮ್ಮ ಸಾಧಕಿಯೋರ್ವಳು ಬಂದು, ''ಮಾತಾಜಿ, ಕೆಸೆಟ್ಟಲ್ಲಿ ಧ್ವನಿ ಚೆನ್ನಾಗಿಲ್ಲ.'' ಎಂದು ಹೇಳಿದ ತಕ್ಷಣ ದಿಗ್ಭ್ರಾಂತಿಯಾಗಿ ಬಿಟ್ಟಿತು.'' ಏಕಮ್ಮಾ, ಕಡೆ ಕ್ಷಣದವರೆಗೂ ನಾನೂ ನೀವೂ ಎಲ್ಲ ಕೇಳಿದ್ದೇವೆ.'' ಎಂದೆ ಕಳವಳದಿಂದ. ಮನಸ್ಸಿನಲ್ಲಿ ಆತಂಕ ಶುರುವಾಯಿತು. ''ಯಾವ ಟೇಪ್‌ರೆಕಾರ್ಡರಲ್ಲಿ ಕೇಳಿದೆ?'' ಎಂದು ಪರಿಶೀಲಿಸಿ, ಮತ್ತೊಂದು ಟೇಪ್ ರೆಕಾರ್ಡರಿಗೆ ಹಾಕಿ ನೋಡಿದೆವು. ಚೆನ್ನಾಗಿಯೇ ಬಂದಿತ್ತು, ಆಕೆ ಕೇಳಿದ್ದ ಟೇಪ್‌ರೆಕಾರ್ಡರ್ ಹಳೆಯ ಒಂದು-ಲಟಕಾ, ರಿಪೇರಿಯಾಗದು ಎಂದು ಮೂಲೆಯಲ್ಲಿ ಬಿಸಾಡಿದ್ದ ಟೇಪ್ ರೆಕಾರ್ಡರ್. ಸುಸ್ಥಿತಿಯಲ್ಲಿದ್ದ ಮತ್ತೊಂದು ಟೇಪ್‌ರೆಕಾರ್ಡರಿನಲ್ಲಿ ಕೇಳಿದಾಗ ನನ್ನ ಆತಂಕ ನಿವಾರಣೆಯಾಗಿ ಸಮಾಧಾನವಾಯಿತು.

ಆಗ ಒಂದು ಸ್ಫುರಣ ಹೊಳೆಯಿತು. ವಚನ ಸಾಹಿತ್ಯವನ್ನು ನೇರವಾಗಿ ಓದಿ, ಬಸವಣ್ಣನವರ ವ್ಯಕ್ತಿತ್ವ-ಸಂದೇಶ ಅರಿತವರು ಕೇಳುವ ಧ್ವನಿ ಅನುಭವ ಮಂಟಪ ಎಂಬ ಸ್ಟುಡಿಯೋ ಸ್ಪೀಕರ್ಸ್‌ನಲ್ಲಿ ಕೇಳುವ ಧ್ವನಿ, ಅತ್ಯದ್ಭುತವಾಗಿ ಕೇಳಿಬರುತ್ತದೆ. ಆದರೆ ತತ್ತ್ವವನ್ನರಿಯದ ವೀರಶೈವರು, ವೀರಶೈವವಾದಿ ಲಿಂಗಾಯತರ ಆಚಾರ-ವಿಚಾರ-ನಂಬಿಕೆಗಳು ರಿಪೇರಿಯಾಗದೆಂದು ಮೂಲೆಗೆಸೆದ ಟೇಪ್ ರೆಕಾರ್ಡರ್‌ದಲ್ಲಿ ಕೇಳುವ ಧ್ವನಿಯಂತೆ. ದೋಷವಿರುವುದು ಕೆಸೆಟ್ಟಿನಲ್ಲಲ್ಲ, ಟೇಪ್ ರೆಕಾರ್ಡರಿನಲ್ಲಿ. ಅದನ್ನರಿಯದ ಲಿಂಗಾಯತೇತರ ವಿಚಾರವಾದಿಗಳು ವೀರಶೈವವಾದಿ ಲಿಂಗಾಯತರ ಬೌದ್ಧಿಕ ಸ್ಥಿತಿಯನ್ನತಿಯದೆ ಇವು ರಿಪೇರಿಯಾಗದ ಯಂತ್ರಗಳು ಎಂದು ಅರಿಯದೆ ಅನುಭವ ಮಂಟಪದ ಶರಣರ ತತ್ತ್ವಸಿದ್ಧಾಂತಗಳನ್ನು ಡಾ|| ಪಿ. ವಿ. ನಾರಾಯಣರಂತೆ ದೂಷಿಸುವರು. ವಚನ ಸಾಹಿತ್ಯಾಭ್ಯಾಸ ಮಾಡಿ ಇದೀಗ ಶರಣ ಧರ್ಮವನ್ನು ಅನುಷ್ಠಾನ ಮಾಡುತ್ತಿರುವ ನಮ್ಮ ಶರಣ ಬಂಧುಗಳನ್ನು ನೋಡಿ ಮೂಲಶರಣರ ವಿಚಾರಧಾರೆ ತಿಳಿಯಲೆತ್ನಿಸುವುದು ಸುಸ್ಥಿತಿಯಲ್ಲಿರುವ ಟೇಪ್ ರೆಕಾರ್ಡಿನಲ್ಲಿ ಅನುಭವ ಮಂಟಪದ ಸಂದೇಶವನ್ನು ತಿಳಿಯಲೆತ್ನಿಸಿದಂತೆ.

- ಮಾತಾಜಿ



ಲಿಂಗಾಯತ ಧರ್ಮೀಯರಲ್ಲಿ ಕಳಕಳಿಯ ಮನವಿ

ಲಿಂಗಾಯತ ಧರ್ಮಬಂಧುಗಳೇ,

ವಿಶ್ವಗುರು ಬಸವಣ್ಣನವರಂತಹ ಅಪೂರ್ವ ದಾರ್ಶನಿಕರು ಸಂಸ್ಥಾಪಿಸಿ ಕೊಟ್ಟ ಪ್ರಗತಿಪರ ಧರ್ಮವಾದ ಲಿಂಗಾಯತ ಧರ್ಮದ ಅನುಯಾಯಿಗಳು ನೀವಾಗಿದ್ದೂ ಕೂಡ ಈ ಧರ್ಮದ ಮಾಹಿತಿಯನ್ನು ಅರಿಯದೆ ಇದನ್ನೊಂದು ಹಿಂದು ಧರ್ಮದ ಒಳಗಿರುವ ಜಾತಿ ಎಂಬಂತೆ ಪರಿಗಣಿಸಿ ಧರ್ಮಗುರುವಿನ ಆಶಯಕ್ಕೆ ವಿರುದ್ಧವಾಗಿ ಎಷ್ಟೋ ಜನ ನಡೆಯುತ್ತಿದ್ದೀರಿ. ಇಷ್ಟಲಿಂಗಧಾರಣೆಯನ್ನು ಪ್ರಮುಖ ಅಂಶವನ್ನಾಗಿ ಇರಿಸಿಕೊಂಡ ಲಿಂಗಾಯತ ಧರ್ಮವು ಒಂದು ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಧರ್ಮ. ಇದು ಒಂದು ಜಾತಿಯಲ್ಲ, ಮತವಲ್ಲ, ಪಂಥವಲ್ಲ, ಪಂಗಡವಲ್ಲ.

ಭಾರತ ಸರಕಾರದವರು ಪ್ರತಿ ೧೦ ವರ್ಷಕ್ಕೊಮ್ಮೆ ಜನಗಣತಿಯನ್ನು ಮಾಡುತ್ತಾರೆ. ಇದು ಧರ್ಮವಾರು ಜನಗಣತಿಯಾಗಿರುತ್ತದೆ, ಜಾತಿವಾರು ಅಲ್ಲ. ಮುಂದಿನ ಜನಗಣತಿಯು ೨೦೦೧ ನೆಯ ಇಸವಿಯಲ್ಲಿ ನಡೆಯುತ್ತದೆ. ಆದ್ದರಿಂದ ಲಿಂಗಾಯತರು ಜನಗಣತಿಯ ೮ನೆಯ ಕಾಲಂದಲ್ಲಿ ಧರ್ಮ (Religion) ಎಂದಿರುವಲ್ಲಿ ಲಿಂಗಾಯತ ಎಂದು ಬರೆಸಬೇಕು. ಹಿಂದು ಲಿಂಗಾಯತ ಎಂದೂ ಬರೆಸಬಾರದು. ವಾಸ್ತವಿಕವಾಗಿ ಹಿಂದು ಒಂದು ಧರ್ಮವಲ್ಲ, ಹಲವಾರು ಭಾರತೀಯ ಜನ್ಯ ಧರ್ಮಗಳ ಒಕ್ಕೂಟ. ಆದರೆ ಬ್ರಿಟಿಷರು ಆರಂಭಿಸಿದ ವ್ಯಾಖ್ಯಾನವನ್ನು ನಂತರವೂ ಭಾರತ ಸರ್ಕಾರ ಮುಂದುವರಿಸಿ ಹಿಂದು ಎಂಬುದನ್ನು ಒಂದು ಧರ್ಮ ಎಂಬುದಾಗಿ ಅಧಿಕೃತವಾಗಿ ಮಾನ್ಯ ಮಾಡಿಬಿಟ್ಟಿದೆ. ಹೀಗಾಗಿ ಯಾವ ಕಾರಣಗಳಿಗಾಗಿ ಭಾರತ ದೇಶದಲ್ಲಿ ಹುಟ್ಟಿರುವ ಬೌದ್ಧ, ಜೈನ, ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳೆಂದು ಘೋಷಿಸಿಕೊಂಡು ಭಾರತ ಸರ್ಕಾರದಿಂದ ಮಾನ್ಯತೆಯನ್ನು ಪಡೆದು ಜನಗಣತಿಯಲ್ಲಿ ಅಧಿಕೃತವಾಗಿ ದಾಖಲಾಗಿವೆಯೋ ಅದೇ ಕಾರಣಗಳಿಗಾಗಿ ಲಿಂಗಾಯತವು ಸ್ವತಂತ್ರ ಧರ್ಮವಾಗುತ್ತದೆ. ಹಿಂದು ಧರ್ಮ ಎಂದು ಸರ್ಕಾರ ಮಾನ್ಯ ಮಾಡಿರುವ ಸಮಾಜ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣ (ವರ್ಗ)ಗಳು. ಐದನೆಯದಾದ ಅಸ್ಪೃಶ್ಯ ಎಂಬ ಐದನೆಯ ವರ್ಣ ಮತ್ತು ಸಾವಿರಾರು ಜಾತಿ ಉಪಜಾತಿಗಳಿವೆ. ಗುರು ಬಸವಣ್ಣನವರ ಪ್ರಕಾರ ಈ ಯಾವ ವರ್ಣ, ವರ್ಗ, ಜಾತಿಗಳೂ ದೇವ ನಿರ್ಮಿತವಲ್ಲ, ಮಾನವ ಕಲ್ಪಿತ. ಆದ್ದರಿಂದ ಹುಟ್ಟಿದ ಎಲ್ಲರೂ ಮಾನವರು. ಅವರು ಸಂಸ್ಕಾರದಿಂದ ಜ್ಞಾನ-ಅನುಭಾವಗಳಿಂದ ಶರಣರಾಗುತ್ತಾರೆ. ತಿಳುವಳಿಕೆಯಿಲ್ಲದೆ ಲಿಂಗಾಯತರು ಹಿಂದು ಲಿಂಗಾಯತ ಎಂದು ಬರೆಸಿದರೆ ಆಗ ಹಿಂದು ಒಂದು ಧರ್ಮವಾಗಿ ಲಿಂಗಾಯತವು ಒಂದು ಜಾತಿ ಎನಿಸಿಕೊಳ್ಳುತ್ತದೆ. ಹಾಗಾದಾಗ ಲಿಂಗಾಯತ ಜಾತಿಯು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಸ್ಪೃಶ್ಯ (ಆಧುನಿಕ ಭಾಷೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ) ಎಂಬ ಯಾವ ವರ್ಣದಲ್ಲಿ ಸೇರಬೇಕು ? ಜನ್ನಿವಾರ ಇರುವವರು ದ್ವಿಜ ವರ್ಣದವರಾಗಿ ಮೊದಲ ಮೂರು ವರ್ಣಗಳಲ್ಲಿ ಸೇರಿ, ವೈದಿಕ ಧರ್ಮದ ವ್ಯಾಖ್ಯಾನುಸಾರವಾಗಿ ಲಿಂಗಾಯತರು ಜನಿವಾರ ಧರಿಸದ ಕಾರಣ ಶೂದ್ರ ಅಥವಾ ಅಸ್ಪೃಶ್ಯ ವರ್ಗದಲ್ಲಿ ಸೇರಬೇಕಾಗುತ್ತದೆ. ಲಿಂಗಾಯತ ಧರ್ಮ ಬಂಧುಗಳೇ, ನಿಮ್ಮನ್ನು

ವರ್ಣಾತೀತರನ್ನಾಗಿ, ಜಾತ್ಯತೀತರನ್ನಾಗಿ, ಸ್ವತಂತ್ರ ಧರ್ಮಾನುಯಾಯಿ ಶರಣರನ್ನಾಗಿ ಮಾಡಿದ ಧರ್ಮಗುರು ಬಸವಣ್ಣನವರು ಕೊಟ್ಟ ಸೌಲಭ್ಯವನ್ನು ಪಡೆದುಕೊಂಡು ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಶೂದ್ರ, ಅಸ್ಪೃಶ್ಯ ವರ್ಣದಲ್ಲಿ ಸೇರುವುದು ಸರಿಯೆ ? ವೈದಿಕ ಧರ್ಮದ ಈ ವ್ಯವಸ್ಥೆಯನ್ನು ಆ ವ್ಯವಸ್ಥೆ ಮಾಡುವ ಅವಮಾನವನ್ನು ವಿರೋಧಿಸಿ ಶೂದ್ರ, ಅಸ್ಪೃಶ್ಯ ವರ್ಣ ಎನ್ನಿಸಿಕೊಳ್ಳಬಯಸದೆ ಅವರೇ ಅವುಗಳನ್ನೂ ತೂರೆಯುತ್ತಿರುವಾಗ ಲಿಂಗಾಯತ ಧರ್ಮಾನುಯಾಯಿಗಳಾಗಿಯೂ ನೀವು ಸರಿಯಾದ ತಿಳುವಳಿಕೆಯಿಲ್ಲದೆ,ದಾರಿ ತಪ್ಪಿಸುವ ವೀರಶೈವವಾದಿ ಸ್ವಾಮಿಗಳು ಮತ್ತು ಕೆಲವು ಮುಖಂಡರ ಮಾತು ಕೇಳಿ ಶೂದ್ರ, ಅಸ್ಪೃಶ್ಯ ವರ್ಣದೊಳಗೆ ಸೇರುವುದು ಸರಿಯೆ ? ಆದ್ದರಿಂದ ೨೦೦೧ನೆಯ ಜನಗಣತಿಯಲ್ಲಿ ಧರ್ಮ (religion) ಎಂಬ ೮ನೆಯ ಕಾಲಂನಲ್ಲಿ ಏನೇನನ್ನೋ ಬರೆಸುವ ಪ್ರಮಾದ ಮಾಡದೆ ಕೇವಲ ಲಿಂಗಾಯತ ಎಂದು ಬರೆಸಿರಿ.

ವೀರಶೈವ/ಲಿಂಗಾಯತ ಸಮಾನಾರ್ಥದ ಪದಗಳಲ್ಲ

ಅಖಿಲ ಭಾರತ ವೀರಶೈವ ಮಹಾಸಭೆ ಎಂಬ ಸಂಸ್ಥೆ ಮತ್ತು ಕೆಲವು ಮಠಾಧೀಶರು ಇಷ್ಟಲಿಂಗಧಾರಿ ಲಿಂಗಾಯತರಿಗೆ 'ವೀರಶೈವ' ಎಂದು ಜನಗಣತಿಯಲ್ಲಿ ಬರೆಸಲು ಪ್ರಚಾರ ಮಾಡುತ್ತಿರುವುದೇ ಅಲ್ಲದೆ ವೀರಶೈವ ಮತ್ತು ಲಿಂಗಾಯತ ಸಮಾನಾರ್ಥದ ಪದಗಳು ಎಂದು ಹೇಳುತ್ತಿದ್ದಾರೆ. ಇದು ಶುದ್ಧ ತಪ್ಪು. ಲಿಂಗಾಯತವು ವಚನ ಸಾಹಿತ್ಯಧಾರಿತವಾದ ಒಂದು ಸ್ವತಂತ್ರ, ಸ್ವಾವಲಂಬಿ, ಜಾತ್ಯಾತೀತ ಧರ್ಮ. ವೀರಶೈವವು ಶೈವದ ಸಪ್ತಶಾಖೆಗಳಲ್ಲೊಂದು. ವೀರಶೈವವು ವರ್ಣಾಶ್ರಮ ಆಧಾರಿತ ಸಮಾಜ ವ್ಯವಸ್ಥೆಯ ಒಂದು ಪಂಥ. (cult or sect). ವೀರಶೈವವು ಸ್ವತಂತ್ರ ಧರ್ಮ ಎನಿಸಿಕೊಳ್ಳುವ ಯಾವುದೇ ತತ್ತ್ವ ಸಂಹಿತೆಯನ್ನೂ ಹೊಂದಿಲ್ಲ. ಈ ಬಗ್ಗೆ ವಿವರ ತಿಳಿಯಲು ಪ್ರತ್ಯೇಕ ಪುಸ್ತಕಗಳಿವೆ. ಆಸಕ್ತರು ಪತ್ರ ಬರೆದು ತರಿಸಿಕೊಳ್ಳಬಹುದು.

ಲಿಂಗಾಯತ ಉಪಜಾತಿಗಳು ಮತ್ತು ಸೌಲಭ್ಯಕ್ಕೆ ಕೊರತೆಯಾಗದು.

ಲಿಂಗಾಯತ ಧರ್ಮಕ್ಕೆ ಅನೇಕ ಜಾತಿಗಳವರು, ಪರಿಶಿಷ್ಟ ಜಾತಿ, ವರ್ಗಗಳವರು ಸೇರಿದ್ದಾರೆ. ಲಿಂಗಾಯತ ಸಮಾಜದ ಕೆಲವು ಉಪಜಾತಿಗಳನ್ನು ಹಿಂದುಳಿದ ವರ್ಗಕ್ಕೆ ಸೇರಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೌಲಭ್ಯ ನೀಡಿವೆ. ಈ ಸೌಲಭ್ಯಗಳನ್ನು ಪಡೆಯುತ್ತಿರುವ ಕೆಲವು ಜಾತಿಗಳವರಿಗೆ ಜನಗಣತಿಯಲ್ಲಿ ಲಿಂಗಾಯತ ಎಂದು ಬರೆಸುವುದರಿಂದ ಸೌಲಭ್ಯಗಳು ಹೋಗುತ್ತವೆಯೆ ಎಂಬ ಸಂದೇಹ ಕಾಡುತ್ತಿದೆ. ಈ ಬಗ್ಗೆ ನಾವು ಮಾಹಿತಿಯನ್ನು ಸಂಗ್ರಹಿಸಿದ್ದೇವೆ. ಭಾರತ ಸರ್ಕಾರವು ಜನಗಣತಿ ಮಾಡುವ ಉದ್ದೇಶ ಕೇವಲ ಭಾರತೀಯ ಪ್ರಜೆಗಳ ಸಂಖ್ಯೆಯನ್ನು ಸಂಗ್ರಹಿಸಲು ಮತ್ತು ಧರ್ಮದ ಆಧಾರದ ಮೇಲೆ ಸಂಗ್ರಹಿಸಲು. ಜಾತಿವಾರು ವಿಂಗಡಣೆ ಮತ್ತು ವಿವರ ಅವರು ಸ್ವೀಕರಿಸುವುದಿಲ್ಲ. ಜನಗಣತಿಯ ಇಲಾಖೆ ಸಂಗ್ರಹಿಸಿದ ವಿವರಗಳೊಡನೆ ನಾಗರಿಕರು ಕೆಲಸ ಮಾಡುವ ಇಲಾಖೆಗಳ ವಿವರಗಳೊಡನೆ ಹೋಲಿಸಿ ತುಲನಾತ್ಮಕವಾಗಿ ಅಧ್ಯಯನ ಮಾಡುವುದಿಲ್ಲ. ಆದ್ದರಿಂದ ವಿದ್ಯಾಭ್ಯಾಸ, ನೌಕರಿ ಮಾಡುವಲ್ಲಿ ಕೊಟ್ಟ ವಿವರಗಳಿಗೂ ಜನಗಣತಿಯಲ್ಲಿ ಕೊಡುವ ವಿವರಗಳಿಗೂ ಸಂಬಂಧವಿರುವುದಿಲ್ಲ. "ಲಿಂಗಾಯತ" - ಒಂದು ಸ್ವತಂತ್ರ ಸ್ವಾವಲಂಬಿ ಧರ್ಮ; ಲಿಂಗಾಯತ ಸಮಾಜವು ಎಲ್ಲ ಜಾತಿ, ವೃತ್ತಿ, ಉದ್ಯೋಗಗಳವರಿಂದ ಕೂಡಿದ ಪರಿಪೂರ್ಣ ಸಮಾಜ ಎಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ ಮುಂದೆ ಈ ಧರ್ಮಕ್ಕೆ ಸ್ವತಂತ್ರ ಧರ್ಮ ಎಂಬ ಮಾನ್ಯತೆ ಬೌದ್ಧ, ಜೈನ, ಸಿಖ್, ಮುಸ್ಲಿಂ, ಕ್ರೈಸ್ತ ಧಾರ್ಮಿಕ

ಸಮಾಜಗಳಿಗೆ ಸಿಕ್ಕಂತೆ ಧಾರ್ಮಿಕ ಅಲ್ಪ ಸಂಖ್ಯಾತರು ಎಂದು ಮನ್ನಣೆ ಸಿಕ್ಕರೆ ಆ ಒಟ್ಟಾಗಿ ಎಲ್ಲ ಲಿಂಗಾಯತ ಉಪಜಾತಿಗಳವರಿಗೂ ಸೌಲಭ್ಯ ಸಿಗುವುದಲ್ಲದೆ ಅನೇಕರಿಗೆ ಧಾರ್ಮಿಕ ಆಶ್ರಯವೂ ಸಿಗುವುದಲ್ಲದೆ, ಮತಾಂತರದ ಅವಾಂತರಗಳೂ ಕಡಿಮೆಯಾಗುವುವು.

ಆದ್ದರಿಂದ ಲಿಂಗಾಯತ ಸಮಾಜದಲ್ಲಿ ಹುಟ್ಟಿದವರೇ ಇರಲಿ, ಸ್ವಯಂ ಪ್ರೇರಣೆಯಿಂದ ದೀಕ್ಷೆ ಪಡೆದುಕೊಂಡವರೇ ಇರಲಿ, ಜನಗಣತಿಯ ಫಾರಂ ದ 8ನೇ ಕಾಲಂ ಧರ್ಮ (Religion) ಎಂದಿರುವಲ್ಲಿ 'ಲಿಂಗಾಯತ' ಎಂದು ಬರೆಸಿರಿ ಮತ್ತು ಗಣತಿಕಾರರು ಬರೆದಿರುವರೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ಅಜ್ಞಾನದಿಂದಲೋ ದುರುದ್ದೇಶದಿಂದಲೋ ಬರೆಯದೆ ಇದ್ದರೆ ಅಂಥ ಗಣತಿಕಾರರ ವಿರುದ್ಧ ನಾಗರಿಕ ಅಧಿಕಾರಿಗಳಾದ ಡಿ. ಸಿ., ಎ.ಸಿ., ತಹಸೀಲ್ದಾರ್ ಮತ್ತು ಪೊಲೀಸ್ ಠಾಣೆಗಳಲ್ಲಿ ದೂರು. ಸಲ್ಲಿಸಿರಿ. 10 ವರ್ಷಕ್ಕೊಮ್ಮೆ ಬರುವ ಜನಗಣತಿಯ ಸದುಪಯೋಗ ಪಡೆದುಕೊಳ್ಳಿರಿ.

ಶುಭಹಾರೈಕೆಗಳೊಡನೆ,

ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಮಾತೆ ಮಹಾದೇವಿ

ಪೀಠಾಧ್ಯಕ್ಷೆ, ಬಸವ ಧರ್ಮಪೀಠ, ಕೂಡಲ ಸಂಗಮ

ಸಂಪರ್ಕಿಸುವ ವಿಳಾಸ :

ಬಸವ ಮಂಟಪ, 2035, 20ನೇ ಮೇನ್, 2ನೇ ಬ್ಲಾಕು,

ರಾಜಾಜಿನಗರ, ಬೆಂಗಳೂರು - 560 010

ದೂರವಾಣಿ : 3325335/3322790

ಪೂಜ್ಯ ಮಾತಾಜಿ ಕುರಿತು

ದುರ್ಗಾ ಮಾತೆ, ಆದರೆ ಕೈಯಲ್ಲಿ ತ್ರಿಶೂಲವಿಲ್ಲ
ಚಂಡಿ ಚಾಮುಂಡಿ, ಆದರೆ ರುಂಡಮಾಲೆಗಳಿಲ್ಲ
ಸರಸ್ವತಿ ದೇವಿ, ಆದರೆ ಸಂಸ್ಕೃತಕ್ಕೆ ಮೀಸಲುಇಲ್ಲ
ಲಕ್ಷ್ಮಿ ದೇವಿ, ಆದರೆ ಹತ್ತು ಸಾರಿ ಭವಕ್ಕೆ ಬರಲಿಲ್ಲ
ದಾಕ್ಷಾಯಿಣಿ ದೇವಿ, ಆದರೆ ಅಗ್ನಿಗೆ ಆಹುತಿಯಾಗಲಿಲ್ಲ
ಭಕ್ತಳು, ಆದರೆ ಮೂಢ ಭಕ್ತಳು ಅಲ್ಲ
ಸಕಲರಿಗೂ ಮಾರ್ಗವ ತೋರಿದ ಮಹಾ
ಮಾತೆ ಮಹಾದೇವಿ ತಾಯಿ ನಮೋ ನಮೋ

- ಶ್ರೀಶೈಲ, ಧಾರವಾಡ

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಗೆ ಸಂತೋಷದ ಸುದ್ದಿ

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇರದೆ ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿರೂಪುಗೊಳ್ಳುತ್ತಿದ್ದು, ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' x ೬೦'-ವಿಸ್ತೀರ್ಣ ೨೪೦೦ ಚ. ಅಡಿಗಳು

ವರ್ಗ 'ಬಿ'-೩೦' x ೪೦'-ವಿಸ್ತೀರ್ಣ ೧೨೦೦ ಚ. ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.


೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ ೧೦೦-೦೦ (ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಹಣಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ, ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :- ದೂರವಾಣಿ : 080 - 3325335, 3322790


Telefax : 3306183

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ ಯೋಜನೆ, ಬಸವ ಮಂಟಪ, ೨೦೩೪, ೨೦ನೆಯ ಮುಖ್ಯರಸ್ತೆ,
೨ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - ೫೬೦ ೦೧೦



ಶರಣ ಮೇಳದ ಸಭೆಯಲ್ಲಿ ಶರಣ ಶರಣೆಯರ ಭವ್ಯ ಸಭಾ ಮಂಟಪ

ಕಲ್ಯಾಣ ಕಿರಣ KRNB 312/BGW 92 ಫೆಬ್ರವರಿ 2000
R. No. 19988/70



ದಿ. ೧೨-೧-೨೦೦೦ ದಂದು ಪ್ರತಿಷ್ಠಾಪನೆಗೊಂಡ ಬಸವ ಗುರುವಿನ
ಅಮೃತಶಿಲಾ ಪುತ್ಥಳಿ ಮತ್ತು ಮಂಟಪ



ಪುತ್ಥಳಿಯ ಪ್ರತಿಷ್ಠಾಪನೆಯ ನಂತರ ಪೂಜ್ಯ ಮಾತಾಜಿ ಮತ್ತು ಪೂಜ್ಯ ಮಾತೆ ಗಂಗಾದೇವಿಯವರು.
ಎಡಬಲದಲಿ ಸನ್ಮಾನಿತರಾದ ದಾನಿಗಳು ಡಾ|| ಎಂ.ಎಸ್. ಮಲಂಗ್ ಮತ್ತು ಶರಣೆ. ಸುರೇಖಾ

ಕಲ್ಯಾಣ ಕಿರಣ KRNB 312/BGW 92 ಜನವರಿ 2000

R. No. 19988/70

